# ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ (ಐಹೆಚ್‌ಡಿಎಸ್)

## 1. ಪೀಠಿಕೆ

ಕೈಮಗ್ಗದ ವಲಯವು ದೇಶದಲ್ಲಿ ಎರಡನೆಯ ಅತಿದೊಡ್ಡ ಉದ್ಯೋಗವಕಾಶ ಉಳ್ಳ ವಲಯವಾಗಿದ್ದು ಸುಮಾರು 63 ಲಕ್ಷ ಜನರಿಗೆ ಉದ್ಯೋಗ ನೀಡುತ್ತಿದೆ. ಈ ವಲಯವು ಭಾರತದ ಪ್ರಾಚೀನ ಕೈಮಗ್ಗದ ನೇಯ್ಗೆಯ ಪರಂಪರೆಯನ್ನು ಇಂದಿಗೂ ಮುಂದುವರಿಸಿಕೊಂಡು ಬರುತ್ತಿರುತ್ತಿದ್ದು ನೇಕಾರರ ಸಮುದಾಯದ ಸಾಮಾಜಿಕ ಸಾಂಸ್ಕೃತಿಕ ಸಂಪ್ರದಾಯದ ದ್ಯೋತಕವಾಗಿದೆ. ಭಾರತ ಸರ್ಕಾರವು ಅನೇಕ ನೀತಿ ಮತ್ತು ಕಾರ್ಯಕ್ರಮಗಳ ಮೂಲಕ ಕೈಮಗ್ಗದ ವಲಯವನ್ನು ಪ್ರೋತ್ಸಾಹಿಸಿ ಮುನ್ನಡೆಸುವ ನಿಯಮವನ್ನು ಪಾಲಿಸುತ್ತಿದೆ. ಒಂಭತ್ತು ಮತ್ತು ಹತ್ತನೇ ಯೋಜನೆಯ ಅವಧಿಯಲ್ಲಿ ಕೇಂದ್ರ ಸರ್ಕಾರದ ಯೋಜನಾತ್ಮಕ ಕಾರ್ಯಗಳು ರಾಜ್ಯದ ಏಜೆನ್ಸಿಗಳು ಹಾಗೂ ಕೈಮಗ್ಗದ ವಲಯದ ಸಹಕಾರಿ ಸಂಘಗಳ ಮೂಲಕವೇ ಆಗಿವೆ. ಆದರೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಬೆಳೆಯುತ್ತಿರುವ ಸ್ಪರ್ಧಾತ್ಮಕತೆ ಹಾಗೂ ಮುಕ್ತ ಮಾರುಕಟ್ಟೆಯ ನಂತರದ ಪರಿಸರದಲ್ಲಿನ ಮುಕ್ತ ವ್ಯಾಪಾರದ ಅವಕಾಶಗಳ ದೆಸೆಯಿಂದಾಗಿ, ಕೈಮಗ್ಗದ ನೇಕಾರರು ಜಾಗತೀಕೃತ ಪರಿಸರದ ಸವಾಲುಗಳನ್ನು ಎದುರಿಸುವಂತೆ ಸಜ್ಜುಗೊಳಿಸುವ ಸಲುವಾಗಿ ಈ ವಲಯದಲ್ಲಿ ಕೇಂದ್ರೀಕೃತ, ಆದರೂ ನಮನೀಯತೆಯಿಂದ ಕೂಡಿದ ಹಾದಿಯನ್ನು ಅನುಸರಿಸುವ ಅಗತ್ಯ ಕಂಡುಬಂದಿದೆ. ಹೊಸ ನಿಲುವು, ಧೋರಣೆಗಳೊಂದಿಗೆ ವೃದ್ಧಿ ಮತ್ತು ವೈವಿಧ್ಯತೆಗಳಿಗಾಗಿ ಆಧಾರಶೀಲ ಹಾದಿಗಳನ್ನು ರೂಪಿಸಿಕೊಳ್ಳಲು ನೇಕಾರರು ಶಕ್ತರಾಗುವಂತೆ ಮಾಡುವ ಅಗತ್ಯವೂ ಬೇಕಾಗಿದೆ. ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ (ಐಹೆಚ್‌ಡಿಎಸ್)ಯು, ಗುರುತಿಸಲ್ಪಟ್ಟ ಕೈಮಗ್ಗದ ಸಮೂಹದ ಒಳಗಿರುವ ಹಾಗೂ ಹೊರಗಿರುವ ಕೈಮಗ್ಗದ ನೇಕಾರರನ್ನು ಏಕರೂಪದ, ಸ್ವಯಂ ನಿರ್ವಹಣಾ ಸಾಮರ್ಥ್ಯದ ಸ್ಪರ್ಧಾತ್ಮಕ, ಸಾಮಾಜಿಕ, ಆರ್ಥಿಕ ಘಟಕವನ್ನಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಒಂದು ಪ್ರಯತ್ನವಾಗಿದೆ.

## 2. ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ (ಐಹೆಚ್‌ಡಿಎಸ್)
## – ಒಂದು ಕೇಂದ್ರೀಯ ಪ್ರಾಯೋಜಿತ ಯೋಜನೆ

ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ (ಐಹೆಚ್‌ಡಿಎಸ್) 11ನೇ ಯೋಜನೆಯಲ್ಲಿ ಅನುಷ್ಠಾನಗೊಳ್ಳಬೇಕಾದ ಕೇಂದ್ರೀಯ ಪ್ರಾಯೋಜಿತ ಯೋಜನೆಯಾಗಿದ್ದು ಇದರಲ್ಲಿ ದೀನದಯಾಳ್ ಹಥ್‌ಕರಗಾ ಪ್ರೋತ್ಸಾಹ ಯೋಜನೆ (ಡಿಡಿಹೆಚ್‌ಪಿವೈ), ಸಮಗ್ರ ಕೈಮಗ್ಗ ತರಬೇತಿ ಯೋಜನೆ (ಐಹೆಚ್‌ಟಿಪಿ), ಸಮಗ್ರ ಕೈಮಗ್ಗ ಸಮೂಹ ಅಭಿವೃದ್ಧಿ ಯೋಜನೆ (ಐಹೆಚ್‌ಸಿಡಿಎಸ್) ಹಾಗೂ ವಸತಿ ಸಹಿತ ಕಾರ್ಯಾಗಾರ ನಿರ್ಮಾಣ ಯೋಜನೆ ಮುಂತಾದ 10ನೇ ಯೋಜನೆಯಲ್ಲಿ ಅನುಷ್ಠಾನಗೊಂಡ ಯೋಜನೆಗಳ ಅಂಶಗಳನ್ನು ಮಾರ್ಪಾಡುಗಳೊಂದಿಗೆ ಅಥವಾ ಮಾರ್ಪಾಡುಗಳಿಲ್ಲದೇ ಸಂಯೋಜಿತಗೊಳಿಸಿ ಕೇಂದ್ರೀಯ ಪ್ರಾಯೋಜಿತ ಯೋಜನೆಯನ್ನಾಗಿ ರೂಪಿಸಲಾಗಿದೆ.

**3. ಯೋಜನೆಯ ಅಂಶಗಳು ;**

ಯೋಜನೆಯು ಕೆಳಕಂಡಂತೆ ನಾಲ್ಕು ಅಂಶಗಳನ್ನು ಹೊಂದಿದೆ.

| ಕ್ರ.ಸಂ. | ಐಹೆಚ್‌ಡಿಎಸ್‌ನ ಅಂಶಗಳು | ಹಣಕಾಸು ನೆರವಿಗೆ ಅರ್ಹವಾಗುವ ಐಹೆಚ್‌ಡಿಎಸ್‌ನ ಉಪ ಅಂಶಗಳು |
|---|---|---|
| ಎ. | ಪ್ರತಿಯೊಂದರಲ್ಲಿಯೂ 300–500 ಕೈಮಗ್ಗಗಳಿರುವ | (i) ಬೇಸ್‌ಲೈನ್ ಸರ್ವೆ, ಸಮಸ್ಯಾ ವಿಧಾನ ಅಧ್ಯಯನ ಹಾಗೂ ಸ್ವಯಂ ಸಮೂಹಗಳು ನೆರವಿನ ಗುಂಪುಗಳ (ಎಸ್‌ಹೆಚ್‌ಜಿಗಳು) ಸ್ಥಾಪನೆ<br>(ii) ಸಮುಚ್ಚಯಗಳ ರಚನೆ<br>(iii) ನೂಲು ಡಿಪೋಗಳನ್ನು ಸ್ಥಾಪಿಸಲು ಮೂಲನಿಧಿ<br>(iv) ವಿನ್ಯಾಸ ಅಭಿವೃದ್ಧಿ ಮತ್ತು ಉತ್ಪನ್ನ ವೈವಿಧ್ಯತೆ<br>(v) ಸಾಮಾನ್ಯ ಸೌಲಭ್ಯ ಕೇಂದ್ರ / ಡೈಹೌಸ್<br>(vi) ಪ್ರಚಾರ ಮತ್ತು ಮಾರ್ಕೆಟಿಂಗ್<br>(vii) ಪ್ರಾಥಮಿಕ ಹೂಡುವಳಿಗಳು<br>(viii) ಯೋಜನಾ ನಿರ್ವಹಣಾ ವೆಚ್ಚ<br>(ix) ಕೌಶಲ್ಯ ಉನ್ನತೀಕರಣ<br>(x) ಕಾರ್ಯಾಗಾರ ನಿರ್ಮಾಣ |
| ಬಿ. | ನಿರಂತರ ಭೌಗೋಳಿಕ ಪ್ರದೇಶಗಳಲ್ಲಿನ ಸಮೂಹದಾಚೆಗಿನ ಯೋಜನಾ ವಿಧಾನದಲ್ಲಿ ಜಾರಿಗೊಳಿಸಬೇಕಾದ ಗುಂಪು ಸಂಪರ್ಕ ವಿಭಾಗ | (ಎ) ಪ್ರಾಥಮಿಕ ಹೂಡುವಳಿಗಳು<br>(ಬಿ) ಕಾರ್ಯಾಗಾರ ನಿರ್ಮಾಣ<br>(ಸಿ) ಕೌಶಲ್ಯ ಉನ್ನತೀಕರಣ |
| ಸಿ. | ಕೈಮಗ್ಗ ಸಂಘಟನೆಗಳಿಗೆ ನೆರವು | 1. ಮಾರುಕಟ್ಟೆಯ ಪ್ರೋತ್ಸಾಹಕ<br>2. ಕೈಮಗ್ಗದ ಸಂಘಟನೆಗಳ ಬಲಸಂವರ್ಧನೆ |
| ಡಿ. | ಇತರೆ | 1. ವಿನೂತನ ಆವಿಷ್ಕಾರಗಳು<br>2. ಪ್ರಚಾರ, ಉಸ್ತುವಾರಿ, ಮೇಲ್ವಿಚಾರಣೆ, ತರಬೇತಿ ಹಾಗೂ ಯೋಜನೆಯ ಮೌಲ್ಯಾಂಕನ |

**4. ಯೋಜನೆಯ ಧ್ಯೇಯೋದ್ದೇಶಗಳು**

- ಆಯ್ದ ಕೈಮಗ್ಗದ ಸಮೂಹಗಳಲ್ಲಿ ಕೈಮಗ್ಗದ ನೇಕಾರರ ಗುಂಪುಗಳನ್ನು ಎದ್ದುಕಾಣುವ ಉತ್ಪಾದನಾ ಘಟಕಗಳನ್ನಾಗಿ ರಚಿಸುವತ್ತ ಕೇಂದ್ರೀಕರಿಸುವುದು.
- ಕೈಮಗ್ಗ ನೇಕಾರರ ಸಮೂಹಗಳು ಸ್ವಯಂ ನಿರ್ಭರವಾಗುವಂತೆ ನೆರವಾಗುವುದು.
- ಸಹಕಾರಿ ವ್ಯಾಪ್ತಿಯೊಳಗಿನ ಮತ್ತು ಹೊರಗಿನ ನೇಕಾರರುಗಳನ್ನು ಸಂಯೋಜಿತ ರೀತಿಯಲ್ಲಿ ಒಳಗೊಳ್ಳುವಿಕೆ.
- ಮಾರುಕಟ್ಟೆಯ ಬೇಡಿಕೆಗಳಿಗನುಗುಣವಾಗಿ ಸುಧಾರಿತ ಗುಣಮಟ್ಟದ ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸಲು ಕೈಮಗ್ಗ ನೇಕಾರರು/ಕಾರ್ಮಿಕರ ಕೌಶಲ್ಯದ ಉನ್ನತೀಕರಣ.
- ಸುಧಾರಿತ ಉತ್ಪಾದಕತೆಯೊಂದಿಗೆ ಲಾಭಾತ್ಮಕತೆಯ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಲು ನೇಕಾರರಿಗೆ ಸೂಕ್ತ ಸ್ಥಳಾವಕಾಶ ಒದಗಿಸುವುದು.
- ಉತ್ಪಾದನೆಯ ನಿರ್ವಹಣೆ, ವಿನ್ಯಾಸ ಮತ್ತು ಮಾರ್ಕೆಟಿಂಗ್‌ಗೆ ಅನುವಾಗುವ ಸಲುವಾಗಿ ಉದ್ಯಮಿಗಳು, ವಿನ್ಯಾಸಕಾರರು ಮತ್ತು ತಜ್ಞರೊಂದಿಗೆ ಸಹಯೋಗ.
- ಬ್ಯಾಂಕುಗಳು/ವಿತ್ತೀಯ ಸಂಸ್ಥೆಗಳಿಂದ ಹಣಕಾಸಿನ ನೆರವಿನ ಪ್ರಕ್ರಿಯೆಗೆ ದಾರಿಮಾಡಿಕೊಡುವುದು.
- ನೇಕಾರರ ಸಹಕಾರೀಕರಣವನ್ನು ಪ್ರೋತ್ಸಾಹಿಸುವುದು.
- ಪ್ರತಿ ಸಮೂಹ/ಗುಂಪಿಗೆ ನಿರ್ದಿಷ್ಟವಾದ ಅಗತ್ಯಾಧಾರಿತ ಹೂಡುವಳಿಗಳನ್ನು ಒದಗಿಸುವ ಸಲುವಾಗಿ ಮಧ್ಯಪ್ರವೇಶ.

ಭಾಗ – ಎ

(ಎ) ಸಮೂಹಾಭಿವೃದ್ಧಿ ಕಾರ್ಯಕ್ರಮ (300–500ರವರೆಗಿನ ಕೈಮಗ್ಗಗಳನ್ನು ಹೊಂದಿರುವ ಸಮೂಹಗಳಿಗೆ ನೆರವು)

ನೇಕಾರರ ಸಮೂಹಗಳು ಎದ್ದು ಕಾಣುವ ನಿಕಾಯಗಳಾಗಿ ನಿಲ್ಲಲು ಸಾಧ್ಯವಾಗುವಂತೆ ರೂಪಿಸಲು ಸಮೂಹಾಭಿವೃದ್ಧಿ ವಿಧಾನವು ಕಾರ್ಯತತ್ಪರವಾಗುವುದು. 300 ರಿಂದ 500 ಕೈಮಗ್ಗಗಳಿಂದ ಕೂಡಿದ 625 ಸಮೂಹಗಳನ್ನು 11ನೇ ಯೋಜನೆಯ ಅವಧಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು. ಇದರಲ್ಲಿ, 2006–07ರಲ್ಲಿ ಸಮಸ್ಯಾನಿದಾನ ಅಧ್ಯಯನಗಳು ಪೂರ್ಣಗೊಂಡಿರುವ 100 ಸಮೂಹಗಳು ಸೇರಿರುತ್ತವೆಯಲ್ಲದೇ 2007–08ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲ್ಪಟ್ಟಿರುವ ಸಮೂಹಗಳನ್ನು ಒಳಗೊಳ್ಳಲಾಗುವುದು.

**(ಎ.1) ಸಮೂಹದ ಅರ್ಥವಿವರಣೆ**

ಕೈಮಗ್ಗದ ವಸ್ತುಗಳನ್ನು ಉತ್ಪಾದಿಸುತ್ತಿರುವ ಅಧಿಕ ಸಂಖ್ಯೆಯ ಕೈಮಗ್ಗಗಳು ಒಂದೆಡೆಯಲ್ಲಿ ಕೇಂದ್ರೀಕೃತವಾಗಿರುವ ಹಾಗೂ ಮಾರುಕಟ್ಟೆಯ ಬೇಡಿಕೆಗಳಿಗೆ ಅನುಗುಣವಾಗಿರುವ ಸ್ಥಳವನ್ನು ಕೈಮಗ್ಗ ಸಮೂಹ (ಹ್ಯಾಂಡ್‌ಲೂಮ್ ಕ್ಲಸ್ಟರ್) ಎಂದು ಅರ್ಥೈಸಬಹುದು. ಈ ಕೈಮಗ್ಗಗಳು ಎರಡು ಕಂದಾಯ ಉಪವಿಭಾಗ/ಹಳ್ಳಿಗಳಲ್ಲಿ ಒಂದು ಆಡಳಿತಾತ್ಮಕ ಜಿಲ್ಲೆ ಅಥವಾ ಎರಡು (ಪಕ್ಕ ಪಕ್ಕದಲ್ಲಿರುವ) ಜಿಲ್ಲೆಗಳಲ್ಲಿ ಪರಸ್ಪರ ಸಮೀಪವಾಗಿಯೂ ಇರಬಹುದು. ಸಣ್ಣ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ, ಹಳ್ಳಿಗಳು/ಉಪವಿಭಾಗಗಳು ಚಿಕ್ಕದಾಗಿದ್ದಲ್ಲಿ ಹಳ್ಳಿ/ಉಪವಿಭಾಗಗಳ ಸಂಖ್ಯೆಯನ್ನು, ಸಮೂಹದ ಕನಿಷ್ಟ ಸಂಭಾವ್ಯ ಗಾತ್ರಕ್ಕೆ ಹೊಂದಿಕೊಳ್ಳುವಂತೆ ಹೆಚ್ಚಿಸಬಹುದಾಗಿದೆ. ದೇಶಾದ್ಯಂತ ಅನೇಕ ಸಮೂಹಗಳಲ್ಲಿ ಕೈಮಗ್ಗಗಳ ಸಂಖ್ಯೆಯು ಬಹಳ ಹೆಚ್ಚಿದ್ದರೂ ಸಹ, ಯೋಜನೆಯ ಉದ್ದೇಶಕ್ಕಾಗಿ ಸಮೂಹದ ಗಾತ್ರವನ್ನು 300–500ರ ವರೆಗಿನ ಕೈಮಗ್ಗಗಳನ್ನು ಹೊಂದಿರುವ ಭಾಗಕ್ಕೆ ಮಿತಿಗೊಳಿಸಲಾಗಿದೆ.

**(ಎ.2) ಬೇಸ್‌ಲೈನ್ ಸರ್ವೆ, ಸಮಸ್ಯಾ ನಿದಾನ ಅಧ್ಯಯನ ಮತ್ತು ಸಮೂಹಾಭಿವೃದ್ಧಿ ನಿರ್ವಾಹಕ**

**(ಎ.2.1) ಬೇಸ್‌ಲೈನ್ ಸರ್ವೆ**

ಬೇಸ್‌ಲೈನ್ ಸರ್ವೇಕ್ಷಣೆಗಾಗಿ ಸಮೂಹದ (300–500) ಪ್ರತಿ ನೇಕಾರರನ್ನು ಭೇಟಿಮಾಡಿ ಆಯಾ ಸಮೂಹದ ಚಿತ್ರಣ ಪಡೆಯುವುದು ಅವಶ್ಯಕ. ಅಂದರೆ, ಚಟುವಟಿಕೆಯಿಂದಿರುವ ಕೈಮಗ್ಗಗಳು, ಕೈಮಗ್ಗಗಳ ವಿಧ, ನೇಕಾರರ ಸಂಖ್ಯೆ (ಪುರುಷರು/ಮಹಿಳೆಯರು/ಸಾಮಾನ್ಯ/ಪ.ಜಾತಿ/ಪ.ಪಂಗಡ/ಒಬಿಸಿ/ಅಲ್ಪಸಂಖ್ಯಾತರು ಇತ್ಯಾದಿ), ಬಳಕೆಯಾಗುವ ನೂಲು, ಉತ್ಪನ್ನ ವೈವಿಧ್ಯ, ನೇಕಾರರ ಸರಾಸರಿ ಆದಾಯ ಮುಂತಾದವುಗಳನ್ನು ಪಡೆದುಕೊಳ್ಳಬೇಕು. ಬೇಸ್‌ಲೈನ್ ಸರ್ವೆ ಮತ್ತು ಸಮಸ್ಯಾ ನಿದಾನ ಅಧ್ಯಯನ ಕೈಗೊಳ್ಳುವ ಸಂಘಟನೆಯ ಪಾರ್ಶ್ವನೋಟದ ನಮೂನೆಯನ್ನು <u>ಅನುಬಂಧ–ಎ.1</u> ನಲ್ಲಿ ನೀಡಲಾಗಿದೆ. ಸಮೂಹದಲ್ಲಿನ ಪ್ರತ್ಯೇಕ ನೇಕಾರರಿಗೆ ಅಗತ್ಯವಿರುವ ನೆರವಿನ ವಿವರ ಮತ್ತು ಬೇಸ್‌ಲೈನ್ ಸರ್ವೇಕ್ಷಣೆಯ ನಮೂನೆಯನ್ನು <u>ಅನುಬಂಧ–ಎ.2</u> ನಲ್ಲಿ ನೀಡಲಾಗಿದೆ.

### (ಎ.2.2) ಸಮಸ್ಯಾನಿದಾನ ಅಧ್ಯಯನ

ಜಾರಿಗೊಳಿಸಬಹುದಾದ ಯಾವುದೇ ಯೋಜನಾಕ್ರಮ ಕೈಗೊಳ್ಳಲು ಸಮೂಹಗಳ ಸಮಸ್ಯೆಗಳನ್ನು ಪತ್ತೆಹಚ್ಚುವುದು ಮೊದಲ ಹೆಜ್ಜೆ. ಇದರಿಂದ ಸಮೂಹವು ಕಾರ್ಯನಿರ್ವಹಿಸುತ್ತಿರುವ ಪರಿಸರ, ಅದರ ಶಕ್ತಿ ಮತ್ತು ದೌರ್ಬಲ್ಯಗಳು ಹಾಗೂ ಪರಿಣಾಮಕಾರಿ ಹುಟ್ಟುವಳಿಗಾಗಿ ಕೈಗೊಳ್ಳಬೇಕಾದ ಕ್ರಮಗಳು ಮುಂತಾದವನ್ನು ಗುರುತಿಸಲು ಸಾಧ್ಯವಾಗುತ್ತದೆ. ಈ ಸಮಸ್ಯಾನಿದಾನದಿಂದ ಕಾರ್ಯತಂತ್ರದ ದಿಕ್ಕು ಹಾಗು ಸಮೂಹಗಳು ಕಾಲಾಂತರದಲ್ಲಿ ಸಾಧಿಸಬಹುದಾದ ಸಂಭಾವ್ಯ ಹುಟ್ಟುವಳಿಗಳು ಮುಂತಾದವು ಸ್ಪಷ್ಟವಾಗುತ್ತವೆ. ಸಮೂಹದ ವ್ಯಕ್ತಿಗಳ ದೃಢೀಕರಣ ಮತ್ತು ವಿಶ್ವಾಸ ನಿರ್ಮಿತಿಗಳಿಂದ ನಿರ್ದಿಷ್ಟ ಕ್ರಮಗಳ ರೂಪುರೇಷೆಗಳು ಮೂಡಿಬರುತ್ತದೆ. ಎ) ಇಂದಿನ ಪರಿಸ್ಥಿತಿಯಲ್ಲಿ ಒಂದು ಸಮೂಹವು ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ತಿಳಿಯುವುದು ಅಂದರೆ, ವ್ಯಾವಹಾರಿಕ ಕಾರ್ಯಾಚರಣೆಗಳು, ಉತ್ಪಾದನಾ ಚಟುವಟಿಕೆಗಳ ಸ್ವಭಾವ, ಉತ್ಪನ್ನಗಳು, ಉತ್ಪಾದನಾ ವಿನ್ಯಾಸಗಳು ಹಾಗೂ ಅದಕ್ಕೆ ಲಭ್ಯವಿರುವ ಮಾರುಕಟ್ಟೆಯನ್ನು ರೂಪಿಸುವಿಕೆ, ಇವುಗಳನ್ನು ಅರಿತು ವಿಶ್ಲೇಷಿಸುವುದು. ಬಿ) ಸಮೂಹದ ಶಕ್ತಿ, ದೌರ್ಬಲ್ಯ ಅವಕಾಶಗಳು ಮತ್ತು ಆತಂಕ (ಎಸ್‌ಡಬ್ಲ್ಯುಒಟಿ)ಗಳ ವಿಶ್ಲೇಷಣೆ. ಸಿ) ನಡುವಿನ ಅಂತರ ಹಾಗೂ ನಿರ್ಬಂಧಗಳನ್ನು ಗುರುತಿಸುವ ಸಲುವಾಗಿ ಮೌಲ್ಯ ಸರಪಳಿಯ ವಿಶ್ಲೇಷಣೆ. ಡಿ) ಕೈಮಗ್ಗದ ಉತ್ಪಾದಕರಿಗೆ ನೆರವಾಗುತ್ತಿರುವ ಸ್ಥಳೀಯ ಸಂಘಟನೆಗಳ ಸಾಮಾಜಿಕ/ಸಾಂಸ್ಥಿಕ ವಿಶ್ಲೇಷಣೆ. ಇ) ಸಮೂಹವು ಕಾರ್ಯನಿರ್ವಹಿಸುತ್ತಿರುವ ಪರಿಸರದ ಸಾಮಾಜಿಕ–ಆರ್ಥಿಕ ಪರಿಸರವನ್ನು ತಿಳಿದುಕೊಳ್ಳುವುದು. ಎಫ್)ಸಮೂಹ ಮತ್ತು ಮಾರುಕಟ್ಟೆಯ ಸಂಭವನೀಯತೆ ಹೆಚ್ಚಿಸಲು ಅಗತ್ಯವಾದ ಕಾರ್ಯ ಯೋಜನೆಗೆ ಸಂಬಂಧಿಸಿದಂತೆ ಶಿಫಾರಸುಗಳು. ಇವುಗಳು ಸಮಸ್ಯಾನಿದಾನ ಅಧ್ಯಯನದ ಉದ್ದೇಶವಾಗಿವೆ. ಕೈಗೊಳ್ಳಲಾದ ಸಮಸ್ಯಾನಿದಾನ ಅಧ್ಯಯನ ಮತ್ತು ಕಾರ್ಯಯೋಜನೆಯ ವಿವರಗಳನ್ನು ಸಲ್ಲಿಸಲು ನಮೂನೆಯು <u>ಅನುಬಂಧ–ಎ.3</u> ರಲ್ಲಿ ಲಭ್ಯವಿದೆ.

### (ಎ.2.3) ಸಮೂಹಾಭಿವೃದ್ಧಿ ನಿರ್ವಾಹಕ (ಸಿಡಿಇ)

ಪ್ರತಿಯೊಂದು ಅನುಷ್ಠಾನ ಏಜೆನ್ಸಿಯೂ ಪ್ರತಿ ಸಮೂಹಕ್ಕೂ ಪ್ರತ್ಯೇಕವಾದ ಸಮೂಹಾಭಿವೃದ್ಧಿ ನಿರ್ವಾಹಕ (ಕ್ಲಸ್ಟರ್ ಡೆವಲಪ್‌ಮೆಂಟ್ ಎಕ್ಸಿಕ್ಯುಟಿವ್)ರೊಬ್ಬರನ್ನು ಗುರುತಿಸಿ ನಿಯೋಜಿಸಬೇಕು. ಇವರು ಆಯಾ ಸಮೂಹದಲ್ಲಿಯೇ ಇದ್ದು, ನಿಯೋಜಿತ ಸಮೂಹದಲ್ಲಿ ಯೋಜನೆಯನ್ನು ಜಾರಿಗೆ ತರುವ ಹೊಣೆ ಹೊಂದಿರುವರು. ಸಮಸ್ಯಾನಿದಾನ ಅಧ್ಯಯನ ಕೈಗೊಳ್ಳುವುದು, ಯೋಜನಾ ವರದಿ ಸಿದ್ಧಪಡಿಸುವುದು ಹಾಗೂ ಸಮೂಹ ಕಾರ್ಯಯೋಜನೆಯ ಪ್ರಕಾರ ನಿಗದಿತ ಕಾಲಮಿತಿಯಲ್ಲಿ ಯೋಜನೆಯನ್ನು ಜಾರಿಗೊಳಿಸುವುದು, ನೇಕಾರರ ಸ್ವಸಹಾಯ ಗುಂಪುಗಳ ರಚನೆ ಮತ್ತು ಬ್ಯಾಂಕು/ಹಣಕಾಸು ಸಂಸ್ಥೆಗಳೊಂದಿಗೆ ಅವುಗಳ ಸಂಪರ್ಕವೇರ್ಪಡಿಸುವುದು, ಸ್ಥಳೀಯ ಆಡಳಿತ ಸಂರಚನೆ ನಿರ್ಮಿಸುವುದು, ಸಮೂಹದ ನೇಕಾರರಿಗೆ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದೊಂದಿಗೆ ಸಂಪರ್ಕ ಕಲ್ಪಿಸಿ ಗುಣಮಟ್ಟದ ನೂಲು, ಬಣ್ಣ ಮತ್ತು ರಾಸಾಯನಿಕಗಳು ಅಗತ್ಯ ಪ್ರಮಾಣದಲ್ಲಿ ದೊರೆಯುವಂತೆ ಮಾಡುವುದು, ಈ ಕಾರ್ಯಗಳು ಸಮೂಹಾಭಿವೃದ್ಧಿ ನಿರ್ವಾಹಕರ ಪಾಲಿನ ಜವಾಬ್ದಾರಿಯಾಗಿರುತ್ತದೆ.

ಸಮೂಹದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಮೂಹದ ಸ್ತರದಲ್ಲಿ ಹೂಡಿಕೆದಾರರನ್ನು ಒಳಗೊಳ್ಳುವ ಹಾಗೂ ಸಿಡಿಇರವರ ಚಟುವಟಿಕೆಗಳಿಗೆ ನೆರವು, ಉಸ್ತುವಾರಿ ನೀಡುವ ಉದ್ದೇಶದಿಂದ ಸಮೂಹಾಭಿವೃದ್ಧಿ ಸಮನ್ವಯ ತಂಡ (ಕ್ಲಸ್ಟರ್ ಡೆವಲಪ್‌ಮೆಂಟ್

ಕೋ–ಆರ್ಡಿನೇಷನ್ ಗ್ರೂಪ್–ಸಿಡಿಸಿಜಿ)ವೊಂದನ್ನು ರಚಿಸಲಾಗುವುದು. ಸಂಬಂಧಿತ ರಾಜ್ಯ ಕೈಮಗ್ಗ ಸಹಾಯಕ ನಿರ್ದೇಶಕರು ಅಥವಾ ರಾಜ್ಯ ಕೈಮಗ್ಗ ಮತ್ತು ಜವಳಿ ನಿರ್ದೇಶಕರಿಂದ ನಿಯೋಜಿಸಲ್ಪಟ್ಟ ಬೇರೆ ಯಾವುದೇ ಅಧಿಕಾರಿಯು (ಕೈಮಗ್ಗ ಸಂಬಂಧಿತ ಕಾರ್ಯಗಳಲ್ಲಿ ತೊಡಗಿರುವವರು) ಈ ತಂಡದ ಪ್ರಮುಖರಾಗಿರುವರು. ಸಮೂಹ ಸ್ತರದ ಈ ತಂಡದಲ್ಲಿ ನೇಕಾರರು ಸ್ವಸಹಾಯ ಗುಂಪುಗಳು, ನೇಕಾರರ ಪ್ರಾಥಮಿಕ ಸಹಕಾರಿ ಸಂಘಗಳು, ಕೈಮಗ್ಗ ಉದ್ಯಮಗಳು, ರಫ್ತು ಘಟಕಗಳು ಹಾಗೂ ಬೆಂಬಲ ಸೇವಾ ಸಂಸ್ಥೆಗಳು, ನಬಾರ್ಡ್, ಬ್ಯಾಂಕುಗಳು, ರಾಜ್ಯ ಸರ್ಕಾರದ ಏಜೆನ್ಸಿಗಳ ಪ್ರತಿನಿಧಿಗಳು ಉಪಸ್ಥಿತರಿರುವರು.

**(ಎ.3) ಸಮೂಹಾಭಿವೃದ್ಧಿಗಾಗಿ ಆರ್ಥಿಕ ನೆರವಿಗೆ ಅರ್ಹವಾಗುವ ಅಂಶಗಳು :**

ಪ್ರತಿ ಸಮೂಹದ ಗರಿಷ್ಠ ಯೋಜನಾ ವೆಚ್ಚವು 3 ವರ್ಷಗಳ ಯೋಜನಾ ಅವಧಿಗೆ ರೂ. 60.00 ಲಕ್ಷಗಳವರೆಗಿರುವುದು.

**(ಎ.3.1) ಸಮೂಹಾಭಿವೃದ್ಧಿ, ಬೇಸ್‌ಲೈನ್ ಸರ್ವೆ, ಸಮಸ್ಯಾನಿದಾನ ಅಧ್ಯಯನ ಮತ್ತು ಸ್ವಸಹಾಯ ಗುಂಪುಗಳ ರಚನೆ :**

ಆಯ್ದ ಸಮೂಹಗಳಿಗಾಗಿ ಸಮೂಹಾಭಿವೃದ್ಧಿ ಅನುಸಂಧಾನವನ್ನು ಬಳಸಲಾಗುವುದು. ಇದರಲ್ಲಿ ಗುರುತಿಸಲ್ಪಟ್ಟ ಅನುಷ್ಠಾನ ಏಜೆನ್ಸಿಯು ಬೇಸ್‌ಲೈನ್ ಸರ್ವೇಕ್ಷಣೆ, ಸಮೂಹದ ಸಮಸ್ಯಾನಿದಾನ ಅಧ್ಯಯನಗಳನ್ನು ಕೈಗೊಂಡು ಸಂಬಂಧಿತ ಆಸಕ್ತರೊಂದಿಗೆ ಚರ್ಚಿಸಿ ವ್ಯಾಪಕ ಸಮೂಹಾಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸುವುದು. ಅನುಷ್ಠಾನ ಏಜೆನ್ಸಿಯು ಸಮೂಹದಲ್ಲಿ ಸ್ವಯಂ ನೆರವು ಗುಂಪುಗಳನ್ನು ರಚಿಸುವುದಲ್ಲದೇ ಹಣಕಾಸಿನ ನೆರವು ಪಡೆಯುವ ಸಲುವಾಗಿ ಬ್ಯಾಂಕಿನೊಂದಿಗೆ ಅವುಗಳಿಗೆ ಸಂಪರ್ಕ ಕಲ್ಪಿಸುವುದು. ಬೇಸ್‌ಲೈನ್ ಸರ್ವೇಕ್ಷಣೆ, ಸಮಸ್ಯಾನಿದಾನ ಅಧ್ಯಯನ, ಸ್ವಯಂ ನೆರವು ಗುಂಪುಗಳ ರಚನೆ ಹಾಗೂ ತರಬೇತಿಗಾಗಿ ಪ್ರತಿ ಸಮೂಹಕ್ಕೆ ಒಂದು ಬಾರಿ ನೀಡಲ್ಪಡುವ ನೆರವಿನ ಮೊತ್ತ ರೂ. 1,25,000/–. ಸರ್ಕಾರವೇ ಜಾರಿಗೊಳಿಸುವ ಏಜೆನ್ಸಿಯಾಗಿರುವ ಸಂದರ್ಭದಲ್ಲಿ, ಬೇಸ್‌ಲೈನ್ ಸರ್ವೇಕ್ಷಣೆ, ಸಮಸ್ಯಾನಿದಾನ ಅಧ್ಯಯನ, ಸ್ವಸಹಾಯ ಗುಂಪುಗಳ ರಚನೆಗಳನ್ನು ರಾಜ್ಯ ಸರ್ಕಾರವೇ ಮಾಡುವುದಲ್ಲದೇ ಇದಕ್ಕಾಗಿ ಹಣಕಾಸಿನ ನೆರವು ನೀಡಲಾಗುವುದಿಲ್ಲ.

**(ಎ.3.2) ಸಮುಚ್ಚಯ ರಚನೆ**

ಸಮುಚ್ಚಯವು ಸ್ವಸಹಾಯ ಗುಂಪುಗಳು (ಎಸ್‌ಹೆಚ್‌ಜಿ), ಸಹಕಾರ ಸಂಘಗಳು, ತಜ್ಞ ನೇಕಾರರು, ಖಾಸಗಿ ಉದ್ಯಮಿಗಳು, ಸ್ವಯಂಸೇವಾ ಸಂಸ್ಥೆಗಳಿಂದ ಮುಂತಾದ ಆಸಕ್ತರನ್ನು ಒಳಗೊಳ್ಳುತ್ತವೆ ಹಾಗೂ ಅವರುಗಳು ನೇಕಾರರೊಂದಿಗೆ ಸಮಾಲೋಚಿಸಿ, ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು, ಮಾರುಕಟ್ಟೆಯ ಸಂಘಟನೆಗಳು/ಮಾರುಕಟ್ಟೆಯ ತಜ್ಞರು, ವ್ಯಾಪಾರಸ್ತರು, ಕಾನೂನು ತಜ್ಞರು, ಸರ್ಕಾರಿ ಸಂಸ್ಥೆಗಳು ಮುಂತಾದವರೊಂದಿಗೆ ಸಂಪರ್ಕಗಳನ್ನು ಏರ್ಪಡಿಸುತ್ತವೆ.

ಸಭೆಗಳನ್ನು ನಡೆಸುವ, ಲೇಖನ ಸಾಮಗ್ರಿಗಳನ್ನು ಖರೀದಿಸುವ, ಕ್ಷೇತ್ರ ಸಂದರ್ಶನ, ವ್ಯವಹಾರ ಮತ್ತು ಅರಿವು ಮೂಡಿಸುವ ತರಬೇತಿ, ಸಮುಚ್ಚಯ ರಚಿಸಲು ಕಾನೂನು ತಜ್ಞರ ಸೇವೆ ಪಡೆಯುವಿಕೆ ಹಾಗೂ ವ್ಯಾಪಾರ ವೃದ್ಧಿಗಾಗಿ ತಜ್ಞರ ಸಲಹೆಗಳು ಮುಂತಾದವುಗಳಿಗಾಗಿ ಈ ಉಪಾಂಗದ ಅಡಿಯಲ್ಲಿ ಪ್ರತಿ ಸಮೂಹಕ್ಕೆ ರೂ. 50,000/–ಗಳ ಒಂದು ಬಾರಿ ನೀಡಲಾಗುವ ಆರ್ಥಿಕ ನೆರವು ಒದಗಿಸಲಾಗುತ್ತದೆ. ಇದನ್ನು ಸಮೂಹದಲ್ಲಿ ಒಂದು ಬಾರಿ 100% ಕೇಂದ್ರದ ಅನುದಾನದ ರೂಪದಲ್ಲಿ ನೀಡಲಾಗುವುದು. ಸಮುಚ್ಚಯವು 3ನೇ ವರ್ಷ ಮತ್ತು ನಂತರದ ನಂತರ ಸಮೂಹದ ಚಟುವಟಿಕೆಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಸ್ವಯಂ ನಿರ್ಭರವಾಗಿ ಅದನ್ನು ನಡೆಸುವುದು.

**(ಎ.3.3) ನೂಲು ಡಿಪೋ ಸ್ಥಾಪನೆಗಾಗಿ ಮೂಲನಿಧಿ**

ಪ್ರಸ್ತುತ ನೇಕಾರರು/ಏಜೆನ್ಸಿಗಳು ನೂಲಿನ ಖರೀದಿಗಾಗಿ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ (ಎನ್‌ಹೆಚ್‌ಡಿಸಿ) ಹಣ ಪಾವತಿ ಮಾಡಬೇಕಿದ್ದು, ಎನ್‌ಹೆಚ್‌ಡಿಸಿ 3–4 ವಾರಗಳ ಕಾಲಾವಧಿಯಲ್ಲಿ ಪೂರೈಕೆ ಮಾಡುತ್ತಿದೆ. ಇದರಿಂದ ಉತ್ಪಾದನೆಯಲ್ಲಿ ವಿಳಂಬ ಉಂಟಾಗುತ್ತಿದೆ. ಹಾಗಾಗಿ, ತಿಂಗಳಿಗೆ 300–500 ಮಗ್ಗಗಳಿಗೆ ಅಗತ್ಯ ಪ್ರಮಾಣದ ನೂಲಿನ ನಿಯಮಿತ ಪೂರೈಕೆಯನ್ನು ಖಾತ್ರಿಪಡಿಸುವ ಸಲುವಾಗಿ, ಸಮೂಹದಲ್ಲಿರುವ ನೂಲು ಡಿಪೋ ಮೂಲಕ ನೇಕಾರರಿಗೆ ನೂಲಿನ ಪೂರೈಕೆ ಮಾಡಲು ಎನ್‌ಹೆಚ್‌ಡಿಸಿಗೆ ರೂ. 3.00 ಲಕ್ಷಗಳ, ಒಂದು ಬಾರಿ ನೀಡಲಾಗುವ ಮೂಲನಿಧಿ ನೀಡಲಾಗುವುದು. ನೇಕಾರರಿಗೆ, ಹಣಪಾವತಿಗೆದುರಾಗಿ ನೂಲು ನೀಡಲಾಗುವುದು.

**(ಎ.3.4) ವಿನ್ಯಾಸಾಭಿವೃದ್ಧಿ ಮತ್ತು ಉತ್ಪನ್ನ ವೈವಿಧ್ಯತೆ**

ಕಂಪ್ಯೂಟರ್ ನೆರವಿನ ವಸ್ತ್ರವಿನ್ಯಾಸ (ಸಿಎಟಿಡಿ), ವರ್ಣ ಸಂಯೋಜನೆ, ಟ್ರೆಂಡ್‌ಫೋರ್‌ಕ್ಯಾಸ್ಟ್ ಮುಂತಾದ ಅವಶ್ಯಕತೆಗಳನ್ನು ಖರೀದಿಸಲು ರೂ. 3.00 ಲಕ್ಷಗಳ ಒಂದು ಬಾರಿ ನೀಡಲಾಗುವ ನೆರವು ಒದಗಿಸಲಾಗುವುದು ಹಾಗೂ ಇದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ/ಫಲಾನುಭವಿ/ಅನುಷ್ಠಾನ ಏಜೆನ್ಸಿಗಳು ಸಮಪ್ರಮಾಣದಲ್ಲಿ ಭರಿಸುತ್ತವೆ.

3 ವರ್ಷಗಳ ಅವಧಿಗೆ ಅರ್ಹ ನುರಿತ ವಿನ್ಯಾಸಗಾರರನ್ನು ನೇಮಕ ಮಾಡಿಕೊಳ್ಳಲು ರೂ. 6.00 ಲಕ್ಷಗಳ ನೆರವು ನೀಡಲಾಗುವುದು. ವಿನ್ಯಾಸಗಾರರನ್ನು ನೇಮಕ ಮಾಡಿಕೊಳ್ಳುವ ಪೂರ್ತಿ ವೆಚ್ಚವನ್ನು ಭಾರತ ಸರ್ಕಾರವೇ ವಹಿಸಿಕೊಳ್ಳುವುದು.

**(ಎ.3.5) ಸಾಮಾನ್ಯ ಸೌಲಭ್ಯಕೇಂದ್ರ / ಡೈಹೌಸ್**

ಸಾಮಾನ್ಯ ಸೌಲಭ್ಯ ಕೇಂದ್ರ ಸ್ಥಾಪಿಸಲು ಒಂದು ಬಾರಿ ನೀಡಲಾಗುವ ನೆರವು ಲಭ್ಯವಿರುವುದು ಹಾಗೂ ಇದು ನೀರು ಸಂಸ್ಕರಣ ಘಟಕ, ತ್ಯಾಜ್ಯ ಸಂಸ್ಕರಣ ಘಟಕ, ಮಗ್ಗಕ್ಕೆ ಪೂರ್ವ ಮತ್ತು ಮಗ್ಗ ನಂತರದ ಕಾರ್ಯಾಚರಣೆಗಳು, ಗುಣನಿಯಂತ್ರಣ ಪ್ರಯೋಗಾಲಯ, ಪ್ರದರ್ಶನಾಂಗಣ/ಸಮಿತಿ ಕೊಠಡಿ/ಸಾಮಾನ್ಯ ಕಾರ್ಯಾಗಾರ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಇದಕ್ಕೆ ಸಂಪೂರ್ಣವಾಗಿ ಕೇಂದ್ರ ಸರ್ಕಾರವೇ ಹಣ ಒದಗಿಸುತ್ತದೆ. ಸಾಮಾನ್ಯ ಸೌಲಭ್ಯ ಕೇಂದ್ರದ ಭಾಗವಾಗಿರುವ ಡೈಹೌಸ್ ಅಗತ್ಯವಿದ್ದಲ್ಲಿ, ಅದರ ನಿರ್ಮಾಣದ ವೆಚ್ಚದ 20%ರಷ್ಟನ್ನು ರಾಜ್ಯ/ಉದ್ಯಮಿ/ಏಜೆನ್ಸಿ/ಸಮುಚ್ಚಯಗಳು ಭರಿಸುವುದು ಹಾಗೂ ಉಳಿದ ಭಾಗವನ್ನು ಕೇಂದ್ರದಿಂದ ಅನುದಾನವಾಗಿ ನೀಡಲಾಗುವುದು. ಹೊಸ ಡೈಹೌಸ್‌ನ ನಿರ್ಮಾಣವು ಅಗತ್ಯವಿಲ್ಲದಿದ್ದಲ್ಲಿ ಈಗಿರುವ ಡೈಹೌಸ್‌ನ ಉನ್ನತೀಕರಣವನ್ನು ಕೈಗೊಳ್ಳಬಹುದಾಗಿದೆ.

ಸಾಮಾನ್ಯ ಸೌಲಭ್ಯ ಕೇಂದ್ರ/ಡೈ ಹೌಸ್ ಸ್ಥಾಪಿಸಲು ರಾಜ್ಯ ಸರ್ಕಾರದ ಮೂಲಕ ಅನುಷ್ಠಾನ ಏಜೆನ್ಸಿಯು ಯೋಜನಾ ವರದಿಯನ್ನು ಸಲ್ಲಿಸುವುದು. ಅದನ್ನು ಡಿಸಿ(ಹೆಚ್‌ಎಲ್)ರವರ ನೇತೃತ್ವದ ಒಂದು ಸಮಿತಿಯು ಅದರ ಕಾರ್ಯಸಾಧುತ್ವ ಹಾಗೂ ಸಮೀಪದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಪರಿಗಣಿಸಿ ಅನುಮೋದಿಸುವುದು. ಸಾಮಾನ್ಯ ಸೌಲಭ್ಯಕೇಂದ್ರ/ಡೈಹೌಸ್ ನಿರ್ಮಿಸಲು ನೀಡಲಾಗುವ ಒಟ್ಟಾರೆ ಸೌಲಭ್ಯವು ಗರಿಷ್ಟ 30.00 ಲಕ್ಷದ ಮಿತಿಗೆ ಒಳಪಟ್ಟಿದೆ. ಡೈಹೌಸ್ ಅನ್ನು ಅಗತ್ಯಕ್ಕನುಗುಣವಾಗಿ ದೊಡ್ಡ ಸಮೂಹಗಳಲ್ಲಿ ಮಾತ್ರ ಸ್ಥಾಪಿಸಲಾಗುವುದು.

**(ಎ.3.6) ಪ್ರಚಾರ ಮತ್ತು ಮಾರ್ಕೆಟಿಂಗ್**

ಭಾರತ ಮತ್ತು ವಿದೇಶಗಳಲ್ಲಿ ಕೈಮಗ್ಗವನ್ನು ಜನಪ್ರಿಯಗೊಳಿಸಿ, ವಿಶಿಷ್ಟ ಕೈಮಗ್ಗದ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪ್ರಚಾರ ಮತ್ತು ಅಭಿವೃದ್ಧಿಗಾಗಿ ಅರ್ಹ ಸಂಘಟನೆಗಳಿಗೆ ಹಣಕಾಸಿನ ನೆರವು ನೀಡಲಾಗುವುದು. ಇದು ಜಾಹೀರಾತು, ಪ್ರಚಾರ ಪುಸ್ತಿಕೆಗಳ ಮುದ್ರಣ, ಕ್ಯಾಟಲಾಗ್‌ಗಳು, ಮಾರುಕಟ್ಟೆಯ ಸಂಶೋಧನೆ, ಮಾರುಕಟ್ಟೆ ಸಮೀಕ್ಷೆ, ಖರೀದಿದಾರರು–ಮಾರಾಟಗಾರರ ಸಮಾವೇಶ, ಇತರ ಸಮೂಹಗಳಿಗೆ ಭೇಟಿ, ಜಾಗೃತಿ ಕಾರ್ಯಕ್ರಮಗಳು ಮುಂತಾದವುಗಳಿಗಾಗಿ ಬಳಸಲಾಗುವುದು. ಈ ನೆರವು ಕೇಂದ್ರ ಸರ್ಕಾರ ಮತ್ತು ರಾಜ್ಯ/ಅನುಷ್ಠಾನ ಏಜೆನ್ಸಿ/ಫಲಾನುಭವಿಗಳ ನಡುವೆ 75:25ರ ಅನುಪಾತದಲ್ಲಿರುವುದು. ವಿವರಗಳು ಕೆಳ ಕಂಡಂತಿರುತ್ತವೆ.

(i) ಜಾಹೀರಾತು, ಪ್ರಚಾರ ಪತ್ರಿಕೆಗಳು ಮತ್ತು ಕ್ಯಾಟಲಾಗ್‌ಗಳ ಮುದ್ರಣಗಳಿಗಾಗಿ ಮೂರು ವರ್ಷಗಳ ಅವಧಿಯಲ್ಲಿ ರೂ. 50,000/–ಗಳ ನೆರವು. ಇದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ/ಅನುಷ್ಠಾನ ಏಜೆನ್ಸಿ/ಫಲಾನುಭವಿಗಳ ನಡುವೆ 75:25 ಅನುಪಾತದಲ್ಲಿ ಹಂಚಿಕೊಳ್ಳಲಾಗುತ್ತದೆ.

(ii) ಮೂರು ವರ್ಷಗಳ ಅವಧಿಯಲ್ಲಿ ಮೂರು ಪ್ರದರ್ಶನ/ಮೇಳಗಳನ್ನು ಏರ್ಪಡಿಸುವುದು/ಅವುಗಳಲ್ಲಿ ಭಾಗವಹಿಸುವದಕ್ಕಾಗಿ ರೂ. 6.00 ಲಕ್ಷಗಳ ನೆರವು. ಇದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ/ಅನುಷ್ಠಾನ ಏಜೆನ್ಸಿ/ಫಲಾನುಭವಿಗಳ ನಡುವೆ 75:25 ಅನುಪಾತದಲ್ಲಿ ಹಂಚಿಕೊಳ್ಳಲಾಗುತ್ತದೆ.

(iii) ಮೂರು ವರ್ಷಗಳ ಅವಧಿಯಲ್ಲಿ ಖರೀದಿದಾರ–ಮಾರಾಟಗಾರರ ಆರು ಮೇಳಗಳನ್ನು ಏರ್ಪಡಿಸಲು ರೂ. 3.00 ಲಕ್ಷಗಳ ನೆರವು. ಇದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ/ಅನುಷ್ಠಾನ ಏಜೆನ್ಸಿ/ಫಲಾನುಭವಿಗಳ ನಡುವೆ 75:25 ಅನುಪಾತದಲ್ಲಿ ಹಂಚಿಕೊಳ್ಳಲಾಗುತ್ತದೆ.

(iv) ಮಾರ್ಕೆಟ್ ಸರ್ವೆ/ಮಾರುಕಟ್ಟೆಯ ನಿಲುವು ಧೋರಣೆಗಳ ಬಗ್ಗೆ ಮರು ಮಾಹಿತಿ ಪಡೆಯುವ ಸಲುವಾಗಿ ಮಾರ್ಕೆಟ್ ಇಂಟೆಲಿಜೆನ್ಸ್‌ಗಳಿಗಾಗಿ, ಒಂದು ಬಾರಿ ನೀಡಲಾಗುವ ರೂ. 1.00 ಲಕ್ಷದ ಹಣಕಾಸಿನ ನೆರವು. ಇದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ/ಅನುಷ್ಠಾನ ಏಜೆನ್ಸಿ/ಫಲಾನುಭವಿಗಳ ನಡುವೆ 75:25 ಅನುಪಾತದಲ್ಲಿ ಹಂಚಿಕೊಳ್ಳಲಾಗುತ್ತದೆ.

(v) ಮೂರು ವರ್ಷಗಳ ಅವಧಿಯಲ್ಲಿ ಪ್ರತಿ ಸಮೂಹಕ್ಕೆ ಪೂರ್ತಿಯಾಗಿ ಕೇಂದ್ರ ಸರ್ಕಾರದಿಂದ ಭರಿಸಲ್ಪಡುವ ರೂ. 3.00 ಲಕ್ಷಗಳವರೆಗಿನ ನೆರವು. ಇದನ್ನು ನೇಕಾರರು ಇತರ ಸಮೂಹಗಳಿಗೆ ಎಕ್ಸ್‌ಪೋಷರ್ ಭೇಟಿ ನೀಡಲು ಪ್ರತಿ ನೇಕಾರರಿಗೆ ರೂ. 3000/–ಗಳಂತೆ ನೀಡಲಾಗುವುದು.

(vi) ಸಮೂಹದ ವೆಬ್‌ಸೈಟ್ ಅಭಿವೃದ್ಧಿಪಡಿಸುವ ಸಲುವಾಗಿ ಕೇಂದ್ರ ಸರ್ಕಾರದಿಂದ ನೀಡಲ್ಪಡುವ ರೂ. 0.25 ಲಕ್ಷಗಳವರೆಗಿನ ನೆರವು.

ಪ್ರಚಾರ ಮತ್ತು ಮಾರ್ಕೆಟಿಂಗ್‌ಗಾಗಿ ನೀಡಲಾಗುವ ಗರಿಷ್ಠ ನೆರವು ಒಟ್ಟಾರೆ 20%ಗಿಂತ ಹೆಚ್ಚಿರುವುದಿಲ್ಲ.

### (ಎ.3.7) ಯೋಜನಾ ನಿರ್ವಹಣಾ ವೆಚ್ಚ

ಯೋಜನಾ ನಿರ್ವಹಣಾ ವೆಚ್ಚ ಭರಿಸಲು ಅನುಷ್ಠಾನ ಏಜೆನ್ಸಿಗೆ ಮೂರು ವರ್ಷಗಳಿಗೆ ಪ್ರತಿ ಸಮೂಹಕ್ಕೆ ವಾರ್ಷಿಕ ರೂ. 2.40 ಲಕ್ಷ ಹಣಕಾಸು ನೆರವು ನೀಡಲಾಗುವುದು. ರಾಜ್ಯ ಸರ್ಕಾರ ಅಥವಾ ಅದರ ಸಂಬಂಧಿತ ಕಚೇರಿಗಳು ಅನುಷ್ಠಾನ ಏಜೆನ್ಸಿಗಳಾಗಿದ್ದಲ್ಲಿ, ಪ್ರತಿ ಸಮೂಹಕ್ಕೆ ವಾರ್ಷಿಕ ರೂ. 25,000/–ಗಳನ್ನು ಮಾತ್ರ ಯೋಜನಾ ನಿರ್ವಹಣಾ ವೆಚ್ಚವಾಗಿ ನೀಡಲಾಗುವುದು.

### 300–500 ಕೈಮಗ್ಗಗಳನ್ನು ಹೊಂದಿರುವ ಸಮೂಹಗಳಿಗೆ ಹಣಕಾಸು ನೆರವಿನ ಹಂಚಿಕೆ ಮತ್ತು ಉಪಾಂಗಗಳ ಸಂಕ್ಷಿಪ್ತರೂಪ

| ಕ್ರ. ಸಂ. | ಉಪಾಂಗಗಳು | ಪ್ರತಿ ಸಮೂಹಕ್ಕೆ ಹಣಕಾಸು ನೆರವು | ಹಂಚಿಕೆ ಕೇಂದ್ರ/ರಾಜ್ಯ ಅನುಷ್ಠಾನ ಏಜೆನ್ಸಿ/ಫಲಾನುಭವಿ |
|---|---|---|---|
| 1 | *ಬೇಸ್‌ಲೈನ್ ಸರ್ವೆ, ಸಮಸ್ಯಾನಿದಾನ ಅಧ್ಯಯನ, ಎಸ್‌ಹೆಚ್‌ಜಿಗಳ ಸ್ಥಾಪನೆ | ಒಂದು ಬಾರಿಗೆ ರೂ. 1.25 ಲಕ್ಷ | 100% ಕೇಂದ್ರ |
| 2 | ಸಮುಚ್ಚಯ ಸ್ಥಾಪನೆ | ರೂ. 50,000/– ಒಂದು ಬಾರಿಗೆ | 100% ಕೇಂದ್ರ |
| 3 | ನೂಲಿನ ಡಿಪೋಗಾಗಿ ಮೂಲನಿಧಿ | ರೂ. 3.00 ಲಕ್ಷ ಒಂದು ಬಾರಿಗೆ | 100% ಕೇಂದ್ರ |
| 4 | ವಿನ್ಯಾಸಾಭಿವೃದ್ಧಿ ಮತ್ತು ಉತ್ಪನ್ನ ವೈವಿಧ್ಯತೆ | ಕಂಪ್ಯೂಟರ್ ಆಧಾರಿತ ಜವಳಿ ವಿನ್ಯಾಸ ವ್ಯವಸ್ಥೆ (ಸಿಎಟಿಡಿ), ಕಲರ್ ಫೋರ್‌ಕಾಸ್ಟ್, ಟ್ರೆಂಡ್ ಫೋರ್‌ಕಾಸ್ಟ್ ಖರೀದಿಸಲು ರೂ. 3.00 ಲಕ್ಷ ಒಂದು ಬಾರಿಗೆ | 50:50 |
| | | ** ವಿನ್ಯಾಸ ತಜ್ಞರ ನೇಮಕಕ್ಕಾಗಿ 3 ವರ್ಷಗಳಿಗೆ ರೂ. 6.00 ಲಕ್ಷ | 100% ಕೇಂದ್ರ |
| 5 | ಸಿಎಫ್‌ಸಿ/ಡೈಹೌಸ್ (ಒಟ್ಟು ಯೋಜನಾ ವೆಚ್ಚದ 50% ಗರಿಷ್ಠ ಮಿತಿ) | ರೂ. 30.00 ಲಕ್ಷ ಒಂದು ಬಾರಿಗೆ | ಸಿಎಫ್‌ಸಿ – 100% ಕೇಂದ್ರ<br>ಡೈಹೌಸ್ – 80:20 ಕೇಂದ್ರ/ರಾಜ್ಯ/ಸಮುಚ್ಚಯ ಏಜೆನ್ಸಿ/ಸಮುಚ್ಚಯ |
| 6 | ಪ್ರಚಾರ ಮತ್ತು ಮಾರ್ಕೆಟಿಂಗ್ (ಯೋಜನಾ ವೆಚ್ಚದ 20% ಗರಿಷ್ಠ ಮಿತಿ) | ಜಾಹೀರಾತು, ಪ್ರಚಾರ ಪುಸ್ತಿಕೆ, ಕ್ಯಾಟಲಾಗ್ ಮುದ್ರಣಕ್ಕೆ ರೂ. 50,000/– ಮೂರು ವರ್ಷಗಳ ಅವಧಿಯಲ್ಲಿ | 75:25 |
| | | ಮೂರು ವರ್ಷಗಳ ಅವಧಿಯಲ್ಲಿ ಮೂರು ಪ್ರದರ್ಶನ/ಮೇಳಗಳಿಗಾಗಿ ರೂ. 6.00 ಲಕ್ಷ | 75:25 |
| | | ಮೂರು ವರ್ಷಗಳ ಅವಧಿಯಲ್ಲಿ ಖರೀದಿ–ಮಾರಾಟಗಾರರ ಆರು ಸಮಾವೇಶಗಳಿಗಾಗಿ ರೂ. 3.00 ಲಕ್ಷ | 75:25 |
| | | ಮಾರ್ಕೆಟ್ ಸರ್ವೆ/ಇಂಟೆಲಿಜೆನ್ಸ್‌ಗಳಿಗಾಗಿ ರೂ. 1.00 ಲಕ್ಷ ಒಂದು ಬಾರಿಗೆ | 75:25 |
| | | ಜಾಗೃತಿ ಮತ್ತು ಎಕ್ಸ್‌ಪೋಷರ್ ಭೇಟಿಗಳಿಗಾಗಿ ಪ್ರತಿ ನೇಕಾರರಿಗೆ ರೂ. 3,000/–ದಂತೆ ರೂ. 3.00 ಲಕ್ಷ ಮೂರು ವರ್ಷಗಳ ಅವಧಿಯಲ್ಲಿ | 100% ಕೇಂದ್ರ |
| | | ವೆಬ್‌ಸೈಟ್ ಅಭಿವೃದ್ಧಿಗಾಗಿ ರೂ. 25,000/– ಒಂದು ಬಾರಿ | 100% ಕೇಂದ್ರ |
| 7 | *** ಯೋಜನಾ ನಿರ್ವಹಣಾ ವೆಚ್ಚ | ಮೂರು ವರ್ಷಗಳ ಅವಧಿಗೆ ಪ್ರತಿ ವರ್ಷಕ್ಕೆ ರೂ. 2.40 ಲಕ್ಷಗಳಂತೆ, ರೂ. 7.20 ಲಕ್ಷ | 100% ಕೇಂದ್ರ |

ಟಿಪ್ಪಣಿ :

(i) * ರಾಜ್ಯ ಸರ್ಕಾರವೇ ಅನುಷ್ಠಾನ ಏಜೆನ್ಸಿಯಾಗಿದ್ದಲ್ಲಿ, ಬೇಸ್‌ಲೈನ್ ಸರ್ವೆ, ಸಮಸ್ಯಾನಿದಾನ ಅಧ್ಯಯನ, ಸ್ವಸಹಾಯ ಗುಂಪುಗಳ ರಚನೆಗಳನ್ನು ರಾಜ್ಯ ಸರ್ಕಾರವೇ ಕೈಗೊಳ್ಳುವುದು ಹಾಗೂ ಈ ಉದ್ದೇಶಕ್ಕಾಗಿ ಹಣಕಾಸು ನೆರವು ನೀಡಲಾಗುವುದಿಲ್ಲ.

(ii) ** ಜವಳಿ ವಿನ್ಯಾಸಗಾರರು ಸಮೂಹದಲ್ಲಿ ನೇಮಕ ಮಾಡಲ್ಪಡಲು 3 ವರ್ಷ ಅನುಭವ ಹೊಂದಿರಬೇಕು ಹಾಗೂ ಅವರು ಎನ್‌ಐಎಫ್‌ಟಿ/ಎನ್‌ಐಡಿಯ ಪದವೀಧರರಾಗಿರಬೇಕು. ಇತರ ಸಂಸ್ಥೆಗಳ ವಿನ್ಯಾಸಕಾರರನ್ನು ನೇಮಕ ಮಾಡಿಕೊಳ್ಳಬೇಕಾದಲ್ಲಿ, ಪ್ರಸ್ತಾವನೆಯೊಂದಿಗೆ ಅವರ ಪರಿಚಯ ಪತ್ರವನ್ನು ಅಭಿವೃದ್ಧಿ ಆಯುಕ್ತರು (ಕೈಮಗ್ಗ) ಇವರ ಕಚೇರಿಗೆ ಸಲ್ಲಿಸಿ ಅವರ ಪೂರ್ವಾನುಮೋದನೆ ಪಡೆದು ನೇಮಕ ಮಾಡಬೇಕು. ಸಾಧ್ಯವಾದಷ್ಟು ಮಟ್ಟಿಗೆ ವಿನ್ಯಾಸಗಾರರು ಅದೇ ರಾಜ್ಯದಲ್ಲಿದ್ದು ಸಮೂಹಕ್ಕೆ ಸಮೀಪದಲ್ಲಿರಬೇಕು.

(iii) *** ರಾಜ್ಯ ಸರ್ಕಾರ ಅಥವಾ ಅದರ ಸಂಬಂಧಿತ ಕಚೇರಿಗಳು ಅನುಷ್ಠಾನ ಏಜೆನ್ಸಿಗಳಾಗಿದ್ದ ಸಂದರ್ಭದಲ್ಲಿ ಪ್ರತಿ ಸಮೂಹಕ್ಕೆ ವಾರ್ಷಿಕ ರೂ. 25,000/–ಗಳನ್ನು ಮಾತ್ರ ಯೋಜನಾ ನಿರ್ವಹಣಾ ವೆಚ್ಚವನ್ನಾಗಿ ನೀಡಲಾಗುವುದು.

**(ಎ.3.8) <u>ಸಮೂಹದ ಪ್ರತ್ಯೇಕ ನೇಕಾರರಿಗೆ ನೆರವು</u>**

300–500 ಕೈಮಗ್ಗಗಳನ್ನು ಹೊಂದಿರುವ ಸಮೂಹಗಳಲ್ಲಿ ಪ್ರತ್ಯೇಕ ನೇಕಾರರಿಗೆ ಪ್ರಾಥಮಿಕ ಹೂಡುವಳಿಗಳು ಹಾಗೂ ಕಾರ್ಯಾಗಾರ ನಿರ್ಮಾಣಕ್ಕಾಗಿಯೂ ಸಹ ನೆರವು ನೀಡಲಾಗುವುದು. ಆದಾಗ್ಯೂ ಈ ಅಂಶಗಳಿಗೆ ನೀಡಲಾಗುವ ಒಟ್ಟಾರೆ ನೆರವು ಸಮೂಹದ ಯೋಜನಾವೆಚ್ಚದ, ಅಂದರೆ ಪ್ರತಿ ಸಮೂಹಕ್ಕೆ ರೂ. 60.00 ಲಕ್ಷಗಳ ಮಿತಿಯ 25%ರ ಒಳಗಿರಬೇಕು. ವಿವರಗಳು ಕೆಳಕಂಡಂತಿವೆ.

**(ಎ.3.8.1) ಪ್ರಾಥಮಿಕ ಹೂಡುವಳಿಗಳು**

**(ಅ) <u>ಕಾರ್ಯಾತ್ಮಕ ಬಂಡವಾಳಕ್ಕಾಗಿ ಮೂಲಧನ:</u>**

ಸ್ವಸಹಾಯ ಗುಂಪುಗಳು ಮತ್ತು ಸಹಕಾರಿ ಸಂಘಗಳಲ್ಲಿ ಸಂಘಟಿತರಾಗಿರುವ ನೇಕಾರರಿಗೆ, ಪ್ರತಿ ನೇಕಾರರಿಗೆ ರೂ. 6,000/–ದಂತೆ ಮೂಲಧನ ನೀಡಲಾಗುವುದು. ನೆರವಿನ 70% ಅನ್ನು ಕೇಂದ್ರ ಸರ್ಕಾರವೂ, 20% ಅನ್ನು ರಾಜ್ಯ ಸರ್ಕಾರವೂ ಹಾಗೂ ಉಳಿದ 10% ಅನ್ನು ಅನುಷ್ಠಾನ ಏಜೆನ್ಸಿ/ಫಲಾನುಭವಿಗಳು ಭರಿಸುವರು.

**(ಆ) ಹೊಸ ಮಗ್ಗಗಳು:**

ಸ್ವಸಹಾಯ ಗುಂಪುಗಳು ಮತ್ತು ಸಹಕಾರಿ ಸಂಘಗಳಲ್ಲಿ ಸಂಘಟಿತರಾಗಿರುವ ನೇಕಾರರಿಗೆ ಹೊಸ ಮಗ್ಗಕ್ಕಾಗಿ ಪ್ರತಿ ನೇಕಾರರಿಗೆ ರೂ. 8,000/–ಗಳ ನೆರವು ಒದಗಿಸಲಾಗುವುದು. ಈ ನೆರವಿನ 70% ಅನ್ನು ಕೇಂದ್ರ ಸರ್ಕಾರವೂ, 20% ಅನ್ನು ರಾಜ್ಯ ಸರ್ಕಾರವೂ ಹಾಗೂ ಉಳಿದ 10% ಅನ್ನು ಅನುಷ್ಠಾನ ಏಜೆನ್ಸಿ/ಫಲಾನುಭವಿಗಳು ಭರಿಸುವರು.

**(ಸಿ) ಡಾಬಿ**

ಸ್ವಸಹಾಯ ಗುಂಪುಗಳು ಮತ್ತು ಸಹಕಾರಿ ಸಂಘಗಳಲ್ಲಿ ಸಂಘಟಿತರಾಗಿರುವ ನೇಕಾರರಿಗೆ ಡಾಬಿ ಖರೀದಿಗಾಗಿ ಪ್ರತಿ ನೇಕಾರರಿಗೆ ರೂ. 4,000/–ದಂತೆ ನೆರವು ಒದಗಿಸಲಾಗುವುದು. ಇದರ 70% ಅನ್ನು ಕೇಂದ್ರ ಸರ್ಕಾರವೂ, 20% ಅನ್ನು ರಾಜ್ಯ ಸರ್ಕಾರವೂ ಹಾಗೂ ಉಳಿದ 10% ಅನ್ನು ಅನುಷ್ಠಾನ ಏಜೆನ್ಸಿ/ಫಲಾನುಭವಿಗಳು ಭರಿಸುವರು.

**(ಡಿ) ಜಾಕಾರ್ಡ್**

ಸ್ವಸಹಾಯ ಗುಂಪುಗಳು ಮತ್ತು ಸಹಕಾರಿ ಸಂಘಗಳಲ್ಲಿ ಸಂಘಟಿತರಾಗಿರುವ ನೇಕಾರರಿಗೆ ಜಾಕಾರ್ಡ್ ಖರೀದಿಗಾಗಿ ಪ್ರತಿ ನೇಕಾರರಿಗೆ ರೂ. 6,000/–ದಂತೆ ನೆರವು ಒದಗಿಸಲಾಗುವುದು. ಇದರ 70% ಅನ್ನು ಕೇಂದ್ರ ಸರ್ಕಾರವೂ, 20% ಅನ್ನು ರಾಜ್ಯ ಸರ್ಕಾರವೂ ಹಾಗೂ ಉಳಿದ 10% ಅನ್ನು ಅನುಷ್ಠಾನ ಏಜೆನ್ಸಿ/ಫಲಾನುಭವಿಗಳು ಭರಿಸುವರು.

**(ಇ) ಸಲಕರಣೆಗಳು**

ಸ್ವಸಹಾಯ ಗುಂಪುಗಳು ಮತ್ತು ಸಹಕಾರಿ ಸಂಘಗಳಲ್ಲಿ ಸಂಘಟಿತರಾಗಿರುವ ನೇಕಾರರಿಗೆ ಸಲಕರಣೆಗಳ ಖರೀದಿಗಾಗಿ ಪ್ರತಿ ನೇಕಾರರಿಗೆ ರೂ. 2,000/–ಗಳ ನೆರವು ಒದಗಿಸುವುದು. ಇದರ 70% ಅನ್ನು ಕೇಂದ್ರ ಸರ್ಕಾರವೂ, 20% ಅನ್ನು ರಾಜ್ಯ ಸರ್ಕಾರವೂ ಹಾಗೂ ಉಳಿದ 10% ಅನ್ನು ಅನುಷ್ಠಾನ ಏಜೆನ್ಸಿ/ಫಲಾನುಭವಿಗಳು ಭರಿಸುವರು.

ಟಿಪ್ಪಣಿ : ಈಶಾನ್ಯ ರಾಜ್ಯಗಳು, ಸಿಕ್ಕಿಂ, ಜಮ್ಮು–ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಂಚಲ, ಛತ್ತೀಸ್‌ಘಡ ಮತ್ತು ಜಾರ್ಖಂಡ್‌ಗಳಲ್ಲಿ ಪ್ರಾಥಮಿಕ ಹೂಡುವಳಿ ಉಪಾಯಗಳ ಹಂಚಿಕೊಳ್ಳುವ ವಿನ್ಯಾಸವು ಕೇಂದ್ರ ಸರ್ಕಾರ – 90%, ರಾಜ್ಯ ಸರ್ಕಾರ –5% ಹಾಗೂ ಫಲಾನುಭವಿ/ಅನುಷ್ಠಾನ ಏಜೆನ್ಸಿ – 5% ಆಗಿರುವುದು.

ನೇಕಾರರ ಅಗತ್ಯಗಳನ್ನು ನಿರ್ಧರಿಸಿದ ನಂತರವೇ ಪ್ರಸ್ತಾವನೆಗಳನ್ನು ಶಿಫಾರಸು ಮಾಡಲಾಗುವುದು. ಒಂದು ಸಮೂಹದ ಪ್ರಾಥಮಿಕ ಹೂಡುವಳಿಗಳ ಅಗತ್ಯಗಳನ್ನು ತೋರಿಸುವ ನಮೂನೆಯು ಅನುಬಂಧ–ಎ–2 ನಲ್ಲಿದೆ.

**(ಎ.3.8.2) ಕಾರ್ಯಾಗಾರ ನಿರ್ಮಾಣ**

ಕಾರ್ಯಾಗಾರ ನಿರ್ಮಾಣಕ್ಕಾಗಿ ನೆರವು ಈ ಕೆಳಗಿನಂತೆ ಒದಗಿಸಲಾಗುವುದು

| ಅಂಗ | ಪ್ರತಿ ಯೂನಿಟ್‌ನ ವಿಸ್ತೀರ್ಣ | ನೆರವಿನ ಮೊತ್ತ |
|---|---|---|
| ಕಾರ್ಯಾಗಾರದ ನಿರ್ಮಾಣ | 20 ಚ. ಮೀಟರ್ | ರೂ. 25,000/- |

ಕೇಂದ್ರದ ನೆರವು ಮೇಲೆ ತಿಳಿಸಿದ ಮಟ್ಟದವರೆಗೆ ಸೀಮಿತವಾಗಿರುವುದು ಹಾಗೂ ಉಳಿದ ವೆಚ್ಚವನ್ನು ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳು/ಅನುಷ್ಠಾನ ಏಜೆನ್ಸಿಗಳು/ಫಲಾನುಭವಿಗಳು ತಮ್ಮ ಸ್ವಂತ ಹಣ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಭರಿಸಬಹುದಾಗಿದೆ.

ಈ ಉಪಾಂಗದಲ್ಲಿ ಬಡತನದ ರೇಖೆಯ ಕೆಳಗಿನ (ಬಿಪಿಎಲ್) ನೇಕಾರರಿಗೆ ಆದ್ಯತೆ ನೀಡಲಾಗುವುದು. ಮನೆ ನಿರ್ಮಾಣಕ್ಕಾಗಿ ನೇಕಾರರು ಗ್ರಾಮೀಣಾಭಿವೃದ್ಧಿ ಸಚಿವಾಲಯದ ಇಂದಿರಾ ಆವಾಸ ಯೋಜನೆಯ ನೆರವು ಪಡೆಯಬಹುದಾಗಿದ್ದು, ಕಾರ್ಯಾಗಾರಕ್ಕಾಗಿ ಈ ಯೋಜನೆಯಡಿ ನೆರವು ಪಡೆಯಬಹುದು. ಬಡತನದ ರೇಖೆಯ ಕೆಳಗೆ ಬಾರದ ಇತರ ನೇಕಾರರನ್ನು ಆ ವರ್ಗಕ್ಕೆ ಸೇರಿದ ನಂತರ ಮಾತ್ರವೇ ಪರಿಗಣಿಸಲಾಗುವುದು. ಬಡತನದ ರೇಖೆಯ ಕೆಳಗಿನ ನೇಕಾರರಿಗೆ ರೂ. 25,000/–ದ ಪೂರ್ಣ ನೆರವನ್ನು ಕೇಂದ್ರ ಸರ್ಕಾರದಿಂದಲೇ ನೀಡಲಾಗುವುದು ಹಾಗೂ ಇತರ ನೇಕಾರರಿಗೆ ಕೇಂದ್ರ ಸರ್ಕಾರದಿಂದ 75% ಅಂದರೆ ರೂ. 18,750/– ನೀಡಲಾಗುವುದು ಮತ್ತು ಉಳಿದ ನೆರವನ್ನು ರಾಜ್ಯ ಸರ್ಕಾರ/ಫಲಾನುಭವಿಗಳಿಂದ ಒದಗಿಸಬೇಕು. ಸದರಿ ಭೂಮಿಯು ನೇಕಾರರ ಹೆಸರಿನಲ್ಲಿರುವುದಕ್ಕೆ ಪ್ರಮಾಣಪತ್ರ ಸಲ್ಲಿಸಬೇಕು.

**(ಎ.3.8.3) ಕೌಶಲ್ಯ ಉನ್ನತೀಕರಣ**

ಬದಲಾಗುತ್ತಿರುವ ಮಾರುಕಟ್ಟೆಯ ಬೇಡಿಕೆಗಳನ್ನು ಪೂರೈಸಲು ಸುಧಾರಿತ ಗುಣಮಟ್ಟದ ವೈವಿಧ್ಯಮಯ ಉತ್ಪನ್ನಗಳ ತಯಾರಿಕೆಗಾಗಿ ನೇಕಾರರು/ಕೆಲಸಗಾರರಿಗೆ ತರಬೇತಿ ಮತ್ತು ಮರು ತರಬೇತಿಗಳು ಅತಿಪ್ರಮುಖ ಹೂಡುವಳಿಗಳೆನಿಸುತ್ತವೆ. ಕೈಮಗ್ಗದ ವಲಯದಲ್ಲಿನ ನೇಕಾರರು/ಕೆಲಸಗಾರರಿಗೆ ತಾಂತ್ರಿಕ ಮತ್ತು ನಿರ್ವಹಣಾತ್ಮಕ ಕೌಶಲ್ಯಗಳ ಉನ್ನತೀಕರಣಕ್ಕಾಗಿ ಈ ಯೋಜನೆಯು ಸಮಗ್ರ ಸಂಪರ್ಕ ಸಾಧನಗಳನ್ನು ಒದಗಿಸುತ್ತದೆ. 20 ಪ್ರಶಿಕ್ಷಣಾರ್ಥಿಗಳ ಪ್ರತಿ ತಂಡಕ್ಕೆ ಕೆಳಕಂಡಂತೆ ಪ್ರತಿ ಕಾರ್ಯಕ್ರಮಕ್ಕೆ ಸೂಚಿಸಲಾಗಿರುವ 100% ಕೇಂದ್ರದ ಅನುದಾನ ಉಂಟು.

(ಅ) ನೇಯ್ಗೆ – ಪ್ರತಿ ತಂಡಕ್ಕೆ ರೂ. 3,00,000/–
(ಆ) ಬಣ್ಣ ಹಾಕುವಿಕೆ – ಪ್ರತಿ ತಂಡಕ್ಕೆ ರೂ. 1,00,000/–
(ಇ) ವಿನ್ಯಾಸ – ಪ್ರತಿ ತಂಡಕ್ಕೆ ರೂ. 50,000/–
(ಈ) ನಿರ್ವಹಣಾ ಕಾರ್ಯಾಗಾರ – ಸ್ವಸಹಾಯ ಗುಂಪುಗಳು/ನೇಕಾರರ ಪ್ರಾಥಮಿಕ ಸಹಕಾರ ಸಂಘ/ಸಮುಚ್ಚಯ ಮುಂತಾದವುಗಳಿಗೆ ನಿರ್ವಹಣ ಸಿಬ್ಬಂದಿಗಳ ತರಬೇತಿಗಾಗಿ ಪ್ರತಿ ತಂಡಕ್ಕೆ (50 ಪ್ರಶಿಕ್ಷಣಾರ್ಥಿಗಳು) ರೂ. 25,000/–

ಕೌಶಲ್ಯ ಉನ್ನತೀಕರಣದ ಮಾರ್ಗಸೂಚಿಗಳನ್ನು ಲಗತ್ತಿಸಲಾಗಿದೆ. ಕೌಶಲ್ಯ ಉನ್ನತೀಕರಣಕ್ಕಾಗಿ ಗರಿಷ್ಠ ನೆರವು, ಯೋಜನಾ ವೆಚ್ಚದ 15%ಗಿಂತ ಹೆಚ್ಚಿರುವುದಿಲ್ಲ. ಸಮೂಹದ ನೇಕಾರರ/ಕೆಲಸಗಾರರ ಕೌಶಲ್ಯ ಉನ್ನತೀಕರಣವನ್ನು ಅನುಷ್ಠಾನ ಏಜೆನ್ಸಿಯ ಮೂಲಕ ಕೈಗೊಳ್ಳಲಾಗುವುದು.

**ವೈಯಕ್ತಿಕ ನೇಕಾರರಿಗೆ ಉಪಾಂಗಗಳು ಹಾಗೂ 300–500 ಕೈಮಗ್ಗ ಹೊಂದಿರುವ ಸಮೂಹಗಳಿಗೆ ಹಣಕಾಸು ನೆರವಿನ ಹಂಚಿಕೆಗಳ ಸಂಕ್ಷಿಪ್ತರೂಪ**

| ಕ್ರ. ಸಂ. | ಉಪಾಂಗಗಳು | ಪ್ರತಿ ನೇಕಾರರಿಗೆ ಹಣಕಾಸಿನ ನೆರವು | ಹಂಚಿಕೆ ಕೇಂದ್ರ ಸರ್ಕಾರ : ರಾಜ್ಯ: ಅನುಷ್ಠಾನ ಏಜೆನ್ಸಿ/ಫಲಾನುಭವಿ |
|---|---|---|---|
| ಎ) | ಪ್ರಾಥಮಿಕ ಹೂಡುವಳಿಗಳು | ಮೂಲಧನವಾಗಿ ರೂ. 6,000/– ಒಂದು ಬಾರಿಗೆ | 70:20:10 |
| | | ಹೊಸ ಮಗ್ಗಕ್ಕಾಗಿ ರೂ. 8,000/– ಒಂದು ಬಾರಿಗೆ | 70:20:10 |
| | | ಡಾಬಿಗಾಗಿ ರೂ. 4,000/– ಒಂದು ಬಾರಿಗೆ | 70:20:10 |
| | | ಜಾಕಾರ್ಡ್‌ಗಾಗಿ ರೂ. 6,000/– ಒಂದು ಬಾರಿಗೆ | 70:20:10 |
| | | ಸಲಕರಣೆಗಳಿಗಾಗಿ ರೂ. 2,000/– ಒಂದು ಬಾರಿಗೆ | 70:20:10 |
| ಬಿ) | ಕಾರ್ಯಾಗಾರ ನಿರ್ಮಾಣ | 20 ಚ.ಮೀ. ವಿಸ್ತೀರ್ಣದ ಕಾರ್ಯಾಗಾರ ನಿರ್ಮಿಸಲು ರೂ. 25,000/–ದ ವರೆಗಿನ ನೆರವನ್ನು ಕೇಂದ್ರ ಸರ್ಕಾರದಿಂದ ಬಡತನದ ರೇಖೆಯ ಕೆಳಗಿನ ನೇಕಾರರಿಗೆ ನೀಡಲಾಗುವುದು. ಇತರ ನೇಕಾರರಿಗೆ ಕೇಂದ್ರ ಸರ್ಕಾರವು ರೂ. 25,000/–ದಲ್ಲಿ 75% ಅಂದರೆ ರೂ. 18750/–ವರೆಗೆ ಮಾತ್ರ ನೆರವು ನೀಡುವುದು | ಉಳಿದಿದ್ದನ್ನು ರಾಜ್ಯ ಸರ್ಕಾರ/ ಫಲಾನುಭವಿಗಳು ಭರಿಸಬೇಕು |
| ಸಿ) | ಕೌಶಲ್ಯ ಉನ್ನತೀಕರಣ (ಒಟ್ಟು ಯೋಜನಾ ವೆಚ್ಚದ 15%ಗೆ ಸೀಮಿತ) | 20 ಪ್ರಶಿಕ್ಷಣಾರ್ಥಿಗಳ ತಂಡಕ್ಕೆ ನೇಯ್ಗೆಗೆ ರೂ. 3.00 ಲಕ್ಷ, ಬಣ್ಣ ಹಾಕುವಿಕೆಗೆ ರೂ. 1.00ಲಕ್ಷ, ವಿನ್ಯಾಸಕ್ಕೆ ರೂ. 0.50 ಲಕ್ಷ, 50 ಪ್ರಶಿಕ್ಷಣಾರ್ಥಿಗಳ ತಂಡಕ್ಕಾಗಿ ನಿರ್ವಹಣಾ ತರಬೇತಿಗಾಗಿ ರೂ. 0.25 ಲಕ್ಷ – ಒಂದು ಬಾರಿಗೆ | 100% ಕೇಂದ್ರ ಸರ್ಕಾರ |

ಟಿಪ್ಪಣಿ : ಕ್ರ.ಸಂ. (ಎ) ಮತ್ತು (ಬಿ)ಗಳಲ್ಲಿನ ಉಪಾಂಗಗಳಿಗೆ ನೀಡಲಾಗುವ ನೆರವನ್ನು ಸಂಬಂಧಿತ ರಾಜ್ಯ ಸರ್ಕಾರದ ಮೂಲಕ ಅನುಷ್ಠಾನ ಏಜೆನ್ಸಿಗೆ ಬಿಡುಗಡೆ ಮಾಡಲಾಗುವುದು.

**(ಎ.4) ನೆರವಿನ ಪ್ರಮಾಣ**

ನೆರವಿನ ಪ್ರಮಾಣವು ಸಮೂಹದ ಅವಶ್ಯಕತೆಗಳು, ಸಮೂಹಾಭಿವೃದ್ಧಿ ಯೋಜನೆಯಲ್ಲಿ ಉದ್ದೇಶಿತವಾದ ಚಟುವಟಿಕೆಗಳ ವ್ಯಾಪ್ತಿ; ಸಮೂಹ ಸಂಘಟನೆಯ ತಾಂತ್ರಿಕ, ಅರ್ಥಿಕ ಮತ್ತು ಅಡಳಿತಾತ್ಮಕ ಸಾಮರ್ಥ್ಯ, ಸಮೂಹದ ಪ್ರೌಢಿಮೆಯ ಮಟ್ಟ ಮತ್ತು ಸಾಧನೆಗಳು ಮುಂತಾದ ಅಂಶಗಳನ್ನಾಧರಿಸಿ ಅಗತ್ಯಾಧಾರಿತವಾಗಿರಬೇಕು. ಪ್ರತಿ ಸಮೂಹದ ಗರಿಷ್ಠ ಸಮ್ಮತಿತ ಯೋಜನಾ ವೆಚ್ಚವು 3 ವರ್ಷಗಳ ಯೋಜನಾ ಅವಧಿಗೆ ಪ್ರತಿ ಸಮೂಹಕ್ಕೆ ರೂ. 60.00 ಲಕ್ಷಗಳನ್ನು ಮೀರುವಂತಿಲ್ಲ. (ವೈಯಕ್ತಿಕ ನೇಕಾರರಿಗೆ ನೆರವೂ ಸೇರಿದಂತೆ) ಹಾಗೂ ಇದರಲ್ಲಿ ಕೇಂದ್ರ, ರಾಜ್ಯ ಮತ್ತು ಅನುಷ್ಠಾನ ಏಜೆನ್ಸಿಗಳ ಪಾಲೂ ಸಹ ಸೇರಿದೆ.

**(ಎ.5) ರಾಜ್ಯ ಮಟ್ಟದ ಯೋಜನಾ ಸಮಿತಿ (ಎಸ್‌ಎಲ್‌ಪಿಸಿ)**

ರಾಜ್ಯಮಟ್ಟದ ಯೋಜನಾ ಸಮಿತಿಗೆ ರಾಜ್ಯ ಆಯುಕ್ತರು/ಕೈಮಗ್ಗ ಮತ್ತು ಜವಳಿ ನಿರ್ದೇಶಕರು ಪ್ರಮುಖರಾಗಿದ್ದು ಕೈಮಗ್ಗದ ವಲಯದಲ್ಲಿ ಸಕ್ರಿಯರಾಗಿರುವ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಕೈಮಗ್ಗ ಸಂಘಟನೆ (ರಾಜ್ಯ ಮಟ್ಟದ (ಅಪೆಕ್ಸ್) ನೇಕಾರರ ಸಹಕಾರ ಸಂಘ ಅಥವಾ ರಾಜ್ಯ ಕೈಮಗ್ಗ ನಿಗಮ), ಪ್ರಮುಖ ರಫ್ತುದಾರರು, ಪ್ರತಿನಿಧಿಗಳು, ಸಂಬಂಧಿತ ನೇಕಾರರ ಸೇವಾಕೇಂದ್ರದ ಪ್ರಭಾರ ಅಧಿಕಾರಿ ಹಾಗೂ ಸ್ವಸಹಾಯ ಗುಂಪಿನ ಸಮೂಹದಿಂದ ಓರ್ವ ನೇಕಾರರು ಇವರುಗಳನ್ನು ಒಳಗೊಂಡಿರುತ್ತದೆ. ಈ ಸಮಿತಿಯು ಯೋಜನಾ ಪ್ರಸ್ತಾವನೆಗಳ ಪರಿಶೀಲನೆ, ಕ್ರಿಯಾ ಯೋಜನೆಯನ್ನು ದೃಢೀಕರಿಸುವಿಕೆ, ಉಸ್ತುವಾರಿ, ಮೌಲ್ಯಮಾಪನ ಮುಂತಾದವುಗಳ ಹೊಣೆ ಹೊತ್ತಿದ್ದು, ಅನುಷ್ಠಾನ ಏಜೆನ್ಸಿಯನ್ನು ಶಿಫಾರಸುಗಳನ್ನು ಮಾಡುತ್ತದೆ.

**(ಎ.6) ಅನುಷ್ಠಾನ ಏಜೆನ್ಸಿ**

ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳು, ಅನುಷ್ಠಾನ ಏಜೆನ್ಸಿಗಳಿಂದ, ಅಂದರೆ ಕೈಮಗ್ಗ ನಿರ್ದೇಶನಾಲಯ ಮತ್ತಿತರ ರಾಜ್ಯ ಸರ್ಕಾರದ ಕಚೇರಿಗಳು, ರಾಜ್ಯ ಕೈಮಗ್ಗ ನಿಗಮಗಳು, ಸಂಘಗಳು, ಸರ್ಕಾರೇತರ ಸೇವಾ ಸಂಸ್ಥೆಗಳಿಂದ (ರಾಜ್ಯ ಸರ್ಕಾರದಿಂದ ಶಿಫಾರಸು ಮಾಡಲ್ಪಟ್ಟು ಕೈಮಗ್ಗಗಳ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ಅನುಮೋದಿಸಲ್ಪಟ್ಟವು) ಪ್ರಸ್ತಾವನೆಗಳನ್ನು ಸ್ವೀಕರಿಸುತ್ತದೆ. ಕೈಮಗ್ಗ ಮತ್ತು ಜವಳಿ ನಿರ್ದೇಶಕರು ಹಾಗೂ ರಾಜ್ಯ ಸರ್ಕಾರದ ಸಂಬಂಧಿತ ಕಚೇರಿಗಳು, ರಾಜ್ಯ ಕೈಮಗ್ಗ ನಿಗಮಗಳು, ಪ್ರಮುಖ ಸಹಕಾರ ಸಂಘಗಳು, ರಾಜ್ಯ ಸರ್ಕಾರದಿಂದ ಶಿಫಾರಸು ಮಾಡಲ್ಪಟ್ಟು ಈ ಕಚೇರಿಯಿಂದ ಅನುಮೋದಿಸಲ್ಪಟ್ಟ ಸರ್ಕಾರೇತರ ಸಂಸ್ಥೆಗಳು, ರಾಷ್ಟ್ರಮಟ್ಟದ ಕೈಮಗ್ಗ ಸಂಘಟನೆಗಳು ಮತ್ತು ಕೇಂದ್ರ ಸರ್ಕಾರದ ಸಂಸ್ಥೆಗಳು ಅನುಷ್ಠಾನ ಏಜೆನ್ಸಿಗಳಾಗಿವೆ. ಸರ್ಕಾರೇತರ ಸಂಸ್ಥೆಗಳ ದರ್ಜೆ ನಿಗದಿಪಡಿಸುವ ನಮೂನೆಯ ಅನುಬಂಧ ಎ–4 ರಲ್ಲಿದೆ. 100% ಅಂಕಗಳಲ್ಲಿ ಕನಿಷ್ಟ 60 ಅಂಕಗಳನ್ನು ಗಳಿಸುವ ಸರ್ಕಾರೇತರ ಸಂಸ್ಥೆಗಳನ್ನು ಮಾತ್ರ ಪರಿಗಣಿಸಲಾಗುವುದು. ಅನುಷ್ಠಾನ ಏಜೆನ್ಸಿಗಳ ಕರ್ತವ್ಯಗಳು ಕೆಳಕಂಡಂತಿವೆ.

(i) ಸಮೂಹಾಭಿವೃದ್ಧಿ ನಿರ್ವಾಹಕರನ್ನು (ಸಿಡಿಇ) ಗುರುತಿಸುವುದು.

(ii) ಸಿಡಿಇಗಳಿಗೆ ತರಬೇತಿ ನೀಡಲು ರಾಜ್ಯಸರ್ಕಾರ/ರಾಜ್ಯಮಟ್ಟದ ಯೋಜನಾ ಸಮಿತಿಯೊಂದಿಗೆ ವ್ಯವಹರಿಸುವುದು.

(iii) ಬೇಸ್‌ಲೈನ್ ಸರ್ವೆ ಮತ್ತು ಸಮಸ್ಯಾನಿದಾನ ಅಧ್ಯಯನ ಕೈಗೊಳ್ಳುವುದು.

(iv) ಸಿಡಿಇಗಳು ಕೈಗೊಂಡ ಸಮಸ್ಯಾನಿದಾನ ಅಧ್ಯಯನದ ಆಧಾರದ ಮೇಲೆ ಯೋಜನೆ ಸಿದ್ಧಪಡಿಸಿ, ಇನ್ನಿತರ ವಿಷಯಗಳೊಂದಿಗೆ ಕ್ರಿಯಾಯೋಜನೆಗಳನ್ನು ನಿಗದಿಡಿಸಿ ಸಮೂಹದ ಅಗತ್ಯಗಳನ್ನು ಸೂಚಿಸಿ, ಚಟುವಟಿಕೆಗಳು ಮತ್ತು ನಿರೀಕ್ಷಿತ ಫಲಿತಾಂಶಗಳು/ಉತ್ಪನ್ನಗಳನ್ನು ಸೂಚಿಸಿ ಆ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಎಸ್‌ಎಲ್‌ಪಿಸಿಗೆ ಸಲ್ಲಿಸಬೇಕು.

(v) ಮೇಲೆ ಹೇಳಿದಂತೆ ಯೋಜನೆಯನ್ನು ಕಾಲಮಿತಿಯೊಳಗಾಗಿ ಜಾರಿಗೊಳಿಸಬೇಕು.

(vi) ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ಕಾಲಕಾಲಕ್ಕೆ ಸಲ್ಲಿಸುವುದು ಹಾಗೂ ಪೂರ್ಣಗೊಳಿಸಿದ ವರದಿಯನ್ನು ರಾಜ್ಯ ಸರ್ಕಾರಕ್ಕೆ ನೀಡುವುದು.

(ಎ.7) ಸಮೂಹಾಭಿವೃದ್ಧಿ ಯೋಜನೆಯ ಕಾಲಾವಧಿ

ಸಮೂಹ ಯೋಜನೆ ಪೂರ್ಣಗೊಳ್ಳಲು ಕಾಲಾವಧಿ 3 ವರ್ಷಗಳು.

(ಎ.8) ಪ್ರಸ್ತಾವನೆ ಸಲ್ಲಿಕೆ ಮತ್ತು ಆರ್ಥಿಕ ನೆರವಿನ ಬಿಡುಗಡೆ

(ಎ.8.1) ಬೇಸ್‌ಲೈನ್ ಸರ್ವೆ ಮತ್ತು ಸಮಸ್ಯಾನಿದಾನ ಅಧ್ಯಯನಕ್ಕಾಗಿ ಆರಂಭಿಕ ಪ್ರಸ್ತಾವನೆ

ಪ್ರತಿ ಸಮೂಹದ ಅಭಿವೃದ್ಧಿಯನ್ನು ರಾಜ್ಯ ಸರ್ಕಾರದ ಮೂಲಕ ಅಥವಾ ಅನುಷ್ಠಾನ ಏಜೆನ್ಸಿಗಳ ಮೂಲಕ ಯೋಜನಾ ವಿಧಾನದಲ್ಲಿ ಕೇಂದ್ರದ ಪ್ರಾಯೋಜಿತ ಯೋಜನೆಯಾಗಿ ಕೈಗೆತ್ತಿಕೊಳ್ಳಲಾಗುವುದು. ಸಮೂಹದ/ಸಮೂಹಗಳ ಬೇಸ್‌ಲೈನ್ ಸರ್ವೆ ಮತ್ತು ಸಮಸ್ಯಾನಿದಾನ ಅಧ್ಯಯನಗಳನ್ನು (ಕಂಡಿಕೆ ಎ.2.2ನಲ್ಲಿ ವಿವರಿಸಿದಂತೆ) ಕೈಗೊಳ್ಳಲು ರಾಜ್ಯ ಸರ್ಕಾರವು ಅನುಷ್ಠಾನ ಏಜೆನ್ಸಿಗಳಿಂದ (ಕಂಡಿಕೆ ಎ.6ನಂತೆ) ಪ್ರಸ್ತಾವನೆಗಳನ್ನು ಆಹ್ವಾನಿಸುವುದು. ಇವು ಎಸ್‌ಎಲ್‌ಪಿಸಿಯಿಂದ ಪರಿಶೀಲಿಸಲ್ಪಟ್ಟು ಅಭಿವೃದ್ಧಿ ಆಯುಕ್ತ (ಕೈಮಗ್ಗ)ರಿಗೆ ಶಿಫಾರಸು ಕಳಿಸಲ್ಪಡುವುದು. ಅಭಿವೃದ್ಧಿ ಆಯುಕ್ತರ ಕಚೇರಿಯು, ಗುರುತಿಸಲ್ಪಟ್ಟ ಕೈಮಗ್ಗದ ಸಮೂಹದ ಬೇಸ್‌ಲೈನ್ ಸರ್ವೆ ಮತ್ತು ಸಮಸ್ಯಾನಿದಾನ ಅಧ್ಯಯನ ಕೈಗೊಳ್ಳಲು 50% ಮೊತ್ತವನ್ನು ಬಿಡುಗಡೆ ಮಾಡುವುದು. ಉಳಿದ 50% ಮೊತ್ತವನ್ನು ಬೇಸ್‌ಲೈನ್ ಸರ್ವೆ ಮತ್ತು ಸಮಸ್ಯಾನಿದಾನ ಅಧ್ಯಯನಗಳ ವರದಿ ಹಾಗೂ ಕ್ರಿಯಾಯೋಜನೆ (ಇನ್ನು ಮುಂದೆ ಯೋಜನಾ ವರದಿ ಎಂದು ಕರೆಯಲ್ಪಡುವುದು)ಯನ್ನು ಎಸ್‌ಎಲ್‌ಪಿಸಿಯಿಂದ ಶಿಫಾರಸಿನ ನಂತರ ನೀಡಿ, ಬೇಸ್‌ಲೈನ್‌ಸರ್ವೆ ಮತ್ತು ಸಮಸ್ಯಾನಿದಾನ ಅಧ್ಯಯನಕ್ಕಾಗಿ ಬಿಡುಗಡೆ ಮಾಡಿದ ಹಣದ ಬಳಕೆಯ ಪ್ರಮಾಣ ಪತ್ರ, ಪರಿಶೋಧಿತ ಲೆಕ್ಕಪತ್ರ ಸಲ್ಲಿಸಿದ ನಂತರ, ಅನುಷ್ಠಾನ ಏಜೆನ್ಸಿಗೆ ರಾಜ್ಯ ಸರ್ಕಾರದ ಮೂಲಕ ಬಿಡುಗಡೆ ಮಾಡಲಾಗುವುದು. ಅನುಷ್ಠಾನ ಏಜೆನ್ಸಿಯಿಂದ ಈಗಾಗಲೇ ಬೇಸ್‌ಲೈನ್‌ಸರ್ವೆ ಮತ್ತು ಸಮಸ್ಯಾನಿದಾನ ಅಧ್ಯಯನಗಳು ನಡೆಸಲ್ಪಟ್ಟಿರುವ ಸಮೂಹಗಳು ಸಹ ಈ ಯೋಜನೆಯಲ್ಲಿ ಒಳಗೊಂಡಿವೆ.

**(ಎ.8.2) ಸಮೂಹ ಅಭಿವೃದ್ಧಿಯ ಯೋಜನಾ ವರದಿ ಕ್ರಿಯಾ ಯೋಜನೆಯ ಸಲ್ಲಿಕೆ ಮತ್ತು ನೆರವಿನ ಬಿಡುಗಡೆ**

ನಿಗದಿತ ನಮೂನೆಯಲ್ಲಿನ (ಅನುಬಂಧ–ಎ–3) ಯೋಜನಾ ವರದಿಯು ಬೇಸ್‌ಲೈನ್‌ಸರ್ವೆ, ಸಮಸ್ಯಾನಿದಾನ ಅಧ್ಯಯನ, ಮೊದಲ ವರ್ಷಕ್ಕಾಗಿ ನಿಗದಿತ ಕ್ರಿಯಾ ಯೋಜನೆ ಹಾಗೂ ಎರಡನೆಯ ಮತ್ತು ಮೂರನೆಯ ವರ್ಷಕ್ಕಾಗಿ ತಾತ್ಪೂರ್ತಿಕ ಕ್ರಿಯಾ ಯೋಜನೆಗಳನ್ನು ಒಳಗೊಂಡಿರುತ್ತದೆ. ಯೋಜನಾ ವರದಿಯ ಪರಿಶೀಲನೆಯನ್ನು ರಾಜ್ಯ ಆಯುಕ್ತರು/ಕೈಮಗ್ಗ ನಿರ್ದೇಶಕರ ನೇತೃತ್ವದ ರಾಜ್ಯಮಟ್ಟದ ಯೋಜನಾ ಸಮಿತಿಯು ನಡೆಸುವುದು. ಸಮೂಹದ ನೇಕಾರರ ಸಾಮಾಜಿಕ–ಆರ್ಥಿಕ ಬೆಳವಣಿಗೆಗೆ ಅನುಕೂಲಕರವೂ, ಕಾರ್ಯಸಾಧುವೂ ಆದ ಪ್ರಸ್ತಾವನೆಗಳನ್ನು ಮಾತ್ರ ಎಸ್‌ಎಲ್‌ಪಿಸಿ ಶಿಫಾರಸು ಮಾಡುವುದು. ರಾಜ್ಯ ಸರ್ಕಾರವು ಅಂತಹಾ ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಅಭಿವೃದ್ಧಿ ಆಯುಕ್ತ (ಕೈಮಗ್ಗ)ರಿಗೆ ಕಳುಹಿಸುವುದು. ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ಪ್ರಸ್ತಾವನೆಗಳ ಪರಿಶೀಲನೆ ಮತ್ತು ಆನುಮೋದನೆಗಳು ಮಾಡಲ್ಪಟ್ಟು ನಂತರ, ಆರ್ಥಿಕ ನೆರವನ್ನು ಮೂರು ಕಂತುಗಳಲ್ಲಿ ಅಂದರೆ, ಮೊದಲ ಕಂತಿನಲ್ಲಿ 30%, ಎರಡನೇ ಕಂತಿನಲ್ಲಿ 40% ವರೆಗೆ ಹಾಗೂ ಉಳಿದ ಮೊತ್ತವನ್ನು ಮೂರನೇ ಕಂತಿನಲ್ಲಿ ಅನುಷ್ಠಾನ ಏಜೆನ್ಸಿಗೆ ಸಮೂಹಾಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗುವುದು. ಬಳಿಕ ಪ್ರಮಾಣ ಪತ್ರಗಳು, ಪರಿಶೋಧಿತ ಲೆಕ್ಕಪತ್ರಗಳು, ಕ್ರಿಯಾ ಯೋಜನೆಯ ಪ್ರಕಾರ ಭೌತಿಕ / ಆರ್ಥಿಕ ಪ್ರಗತಿಯ ವಿವರಗಳನ್ನು ಸಲ್ಲಿಸಿದ ನಂತರ, ರಾಜ್ಯ ಸರ್ಕಾರದ ಮೂಲಕ ಕೇಂದ್ರದ ನೆರವನ್ನು ಅನುಷ್ಠಾನ ಏಜೆನ್ಸಿಗೆ ನೀಡಲಾಗುವುದು. ಅನುಷ್ಠಾನ ಏಜೆನ್ಸಿಯು ಸೂಕ್ತ ಸಾಮಾನ್ಯ ಹಣಕಾಸು ನಿಯಮಗಳ (ಜಿಎಫ್‌ಆರ್) ಪ್ರಕಾರ ದಾಖಲೆಗಳನ್ನು ಇಟ್ಟಿರುತ್ತದೆ. ರಾಜ್ಯ ಸರ್ಕಾರಗಳೂ ಸಹ ಬೇಸ್‌ಲೈನ್ ಸರ್ವೆ ಮತ್ತು ಸಮಸ್ಯಾನಿದಾನ ಅಧ್ಯಯನ ಹಾಗೂ ಸಮೂಹಾಭಿವೃದ್ಧಿ ಕ್ರಿಯಾಯೋಜನೆಗಳೊಂದಿಗೆ ಸಂಯೋಜಿತ ಯೋಜನಾ ವರದಿಗಳನ್ನು ಸಲ್ಲಿಸಬಹುದು. ಅಂತಹಾ ಸಂದರ್ಭಗಳಲ್ಲಿ ಬೇಸ್‌ಲೈನ್ ಸರ್ವೆ ಮತ್ತು ಸಮಸ್ಯಾನಿದಾನ ಅಧ್ಯಯನಗಳ ಒಟ್ಟು ವೆಚ್ಚ ಹಾಗೂ ಪ್ರಸ್ತಾಪಿತ ಕ್ರಿಯಾಯೋಜನೆಯ 30% ಮೊತ್ತವನ್ನು ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ಮೊದಲನೇ ಕಂತಿನ ರೂಪದಲ್ಲಿ ಬಿಡುಗಡೆ ಮಾಡಬಹುದಾಗಿದೆ.

ಭಾಗ – ಬಿ

(ಬಿ) ಕೈಮಗ್ಗಗಳ ಅಭಿವೃದ್ಧಿಗಾಗಿ "ಗುಂಪು ದೃಷ್ಟಿಕೋನ"

ಸಮೂಹಗಳಿಂದ ಒಳಗೊಳ್ಳದಿರುವ ಕೈಮಗ್ಗದ ನೇಕಾರರಿಗೆ 'ಗುಂಪು ದೃಷ್ಟಿಕೋನ'ದ ಮೂಲಕ ಅನುಕೂಲ ಮಾಡಲಾಗುವುದು. ಇದನ್ನು, ಒಂದೇ ರೀತಿಯ ಉತ್ಪದನಾ ವೈಶಿಷ್ಟ್ಯಗಳನ್ನು ಹೊಂದಿರುವ ಒಂದು ರೆವಿನ್ಯೂ ಗ್ರಾಮ, ಗ್ರಾಮೀಣ ಪ್ರದೇಶದಲ್ಲಿನ ಒಂದು ಬ್ಲಾಕ್ ಮತ್ತು ನಗರ ಪ್ರದೇಶಗಳಲ್ಲಿನ ವಾರ್ಡ್‌ಗಳಂತಹಾ ನಿರಂತರ ಭೌಗೋಳಿಕ ಪ್ರದೇಶಗಳಲ್ಲಿರುವ ಕೈಮಗ್ಗ ನೇಕಾರರ ಅಭಿವೃದ್ಧಿಗಾಗಿ ಯೋಜನಾ ವಿಧದಲ್ಲಿ ಜಾರಿಗೊಳಿಸಲಾಗುವುದು. ಒಂದು ಗುಂಪಿನಲ್ಲಿ 10 ಅಥವಾ ಹೆಚ್ಚಿನ ನೇಕಾರರಿದ್ದು ಅವರು ಸ್ವಸಹಾಯ ನೆರವಿನಗುಂಪು/ಪ್ರಾಥಮಿಕ ನೇಕಾರರ ಸಹಕಾರ ಸಂಘ/ಇತರ ಸ್ವತಂತ್ರ/ವ್ಯಕ್ತಿಗತ ನೇಕಾರರ ರೂಪದಲ್ಲಿರಬೇಕು. ಆಯಾ ರಾಜ್ಯದ ನಿರ್ದೇಶಕರು (ಕೈಮಗ್ಗ) ನೇಕಾರರಿಗೆ ನೆರವಿನ ಅವಶ್ಯಕತೆ/ಅಗತ್ಯಗಳು ಹಾಗೂ ಅಂತಹಾ ನೆರವಿನಿಂದ ಲಭ್ಯವಾಗುವ ಸಾಮಾಜಿಕ – ಆರ್ಥಿಕ ಅನುಕೂಲಗಳನ್ನು ಒಳಗೊಂಡಂತೆ ಬೇಸ್‌ಲೈನ್‌ಸರ್ವೆ ಕೈಗೊಳ್ಳಬೇಕು. ಇದನ್ನು ಆಧರಿಸಿ ತಯಾರಿಸಲ್ಪಡುವ ಯೋಜನಾ ವರದಿಯ ಆಧಾರದ ಮೇಲೆ ಈ ಗುಂಪುಗಳಿಗೆ ಹಣಕಾಸಿನ ನೆರವನ್ನು ಎಸ್‌ಎಲ್‌ಪಿಸಿ ಶಿಫರಸು ಮಾಡುವುದು. ಅಭಿವೃದ್ಧಿ ಆಯುಕ್ತ (ಕೈಮಗ್ಗ)ರ ಕಚೇರಿಯಿಂದ ಪರಿಶೀಲನೆ ನಡೆಸಿದ ನಂತರ, ಕಾರ್ಯಸಾಧುವೆನಿಸುವ ಅಂಶಗಳ ಬಗ್ಗೆ ನೆರವಿನ ಬಿಡುಗಡೆ ಮಾಡಲಾಗುವುದು. ಇಂತಹ ನೇಕಾರರ ಗುಂಪುಗಳಿಗೆ ಕೆಳಗಿನಂತೆ ನೆರವು ಒದಗಿಸಲಾಗುವುದು.

1. **ಪ್ರಾಥಮಿಕ ಹೂಡುವಳಿಗಳು :** ಹೊಸ ಮಗ್ಗ, ಡಾಬಿ, ಜಾಕಾರ್ಡ್ ಮತ್ತಿತರ ಸಲಕರಣೆಗಳು ಮುಂತಾದ ಪ್ರಾಥಮಿಕ ಹೂಡುವಳಿಗಳಿಗಾಗಿ ವೈಯಕ್ತಿಕ ನೇಕಾರರಿಗೆ ನೆರವು ಒದಗಿಸಲಾಗುವುದು. ತಾವೇ ಸ್ವತಃ ಅಥವಾ ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳು, ಸ್ವಯಂ ನೆರವಿನ ಗುಂಪುಗಳು ಅಥವಾ ಪ್ರಮುಖ ನೇಕಾರರುಗಳ ಮೂಲಕ ಬ್ಯಾಂಕುಗಳೊಂದಿಗೆ ಸಾಲ ಸಂಪರ್ಕಗಳನ್ನು ಪಡೆದುಕೊಂಡಿರುವ ಕೈಮಗ್ಗ ನೇಕಾರರುಗಳಿಗೆ ಮೂಲಧನದ ನೆರವು ಒದಗಿಸಲಾಗುವುದು.

2. **ನೇಯ್ಗೆ, ಬಣ್ಣ ಹಾಕುವಿಕೆ, ವಿನ್ಯಾಸ ಮತ್ತು ನಿರ್ವಹಣೆಗಳ ತರಬೇತಿ ಕಾರ್ಯಕ್ರಮ**ಗಳನ್ನು ಪ್ರಾಥಮಿಕ ನೇಕಾರರ ಸಹಕಾರಿ ಸಂಘ/ಸಮುಚ್ಚಯ/ಸ್ವಸಹಾಯ ನೆರವು ಗುಂಪುಗಳು/ಪ್ರಮುಖ ನೇಕಾರರುಗಳಿಗಾಗಿ ಸಂಬಂಧಿತ ನೇಕಾರರ ಸೇವಾ ಕೇಂದ್ರಗಳು ಏರ್ಪಡಿಸುತ್ತವೆ. ಕೌಶಲ್ಯ ಉನ್ನತೀಕರಣದ ಮಾರ್ಗಸೂಚಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಈ ಅಂಶದ ನೆರವನ್ನು ಸಂಬಂಧಿತ ನೇಕಾರರ ಸೇವಾ ಕೇಂದ್ರಕ್ಕೆ ನೇರವಾಗಿ ಬಿಡುಗಡೆ ಮಾಡಲಾಗುವುದು.

3. **ಕಾರ್ಯಾಗಾರಗಳ ನಿರ್ಮಾಣ ಸೌಲಭ್ಯ**ವನ್ನು ಮಗ್ಗ ಸ್ಥಾಪಿಸಲು ತಮ್ಮದೇ ಆದ ಜಾಗ ಹೊಂದಿರದ ಹಾಗೂ ಪ್ರಮುಖ ನೇಕಾರರು/ಸಂಘಗಳ ಅನ್ಯ ಸ್ಥಳಗಳಲ್ಲಿನ ಮಗ್ಗಗಳಲ್ಲಿ ಕೆಲಸ ಮಾಡುತ್ತಿರುವ ನೇಕಾರರಿಗೆ ಒದಗಿಸಲಾಗುವುದು. ಈ ಸೌಲಭ್ಯವನ್ನು ಒಂದು ಸ್ವಸಹಾಯ ನೆರವಿನ ಗುಂಪು/ಸಹಕಾರಿ ಸಂಘ ಹಾಗೂ ಪ್ರತ್ಯೇಕ ನೇಕಾರರುಗಳ, ರಾಜ್ಯದ ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯದಿಂದ ಪ್ರಾಯೋಜಿಸಲ್ಪಟ್ಟ 10 ಮಂದಿ ನೇಕಾರರ ಗುಂಪಿಗೆ ನೀಡಲಾಗುವುದು. ಕಾರ್ಯಾಗಾರ ನಿರ್ಮಾಣದ ನೆರವನ್ನು ಕೆಳಕಂಡಂತೆ ನೀಡಲಾಗುವುದು.

| ಉಪಾಂಗಗಳು | ಪ್ರತಿ ಘಟಕದ ವಿಸ್ತೀರ್ಣ | ನೆರವಿನ ಮೊತ್ತ |
|---|---|---|

ಕಾರ್ಯಾಗಾರ ನಿರ್ಮಾಣ 20 ಚದರ ಮೀಟರ್‌ಗಳು ರೂ. 25,000/-

ಕೇಂದ್ರದ ನೆರವು ಮೇಲೆ ಹೇಳಲಾದ ಮಟ್ಟದ ಮಿತಿಗೆ ಒಳಪಟ್ಟಿದ್ದರೂ ಸಹ ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳು/ಅನುಷ್ಠಾನ ಏಜೆನ್ಸಿಗಳು/ಫಲಾನುಭವಿಗಳು ಹೆಚ್ಚಿನ ವೆಚ್ಚವನ್ನು ತಮ್ಮ ಸ್ವಂತ ವಂತಿಕೆಗಳು ಅಥವಾ ಹಣಕಾಸು ಸಂಸ್ಥೆಗಳ ಸಾಲದಿಂದ ಭರಿಸಲು ಸ್ವಾತಂತ್ರ್ಯ ಹೊಂದಿರುವರು.

ಇದರಲ್ಲಿ ಬಡತನದ ರೇಖೆಯ ಕೆಳಗಿನ (ಬಿಪಿಎಲ್) ನೇಕಾರರಿಗೆ ಆದ್ಯತೆ ನೀಡಲಾಗುವುದು. ಮನೆಗಳ ನಿರ್ಮಾಣಕ್ಕಾಗಿ ನೇಕಾರರು ಗ್ರಾಮೀಣಾಭಿವೃದ್ಧಿ ಸಚಿವಾಲಯದ ಇಂದಿರಾ ಆವಾಸ ಯೋಜನೆಯ ನೆರವು ಪಡೆಯಬಹುದಾಗಿದ್ದು, ಕಾರ್ಯಾಗಾರ ನಿರ್ಮಾಣಕ್ಕಾಗಿ ಮಾತ್ರ ಈ ಯೋಜನೆಯ ನೆರವು ಪಡೆಯಬಹುದಾಗಿದೆ. ಬಡತನದ ರೇಖೆಯ ಕೆಳಗಿನವರನ್ನು ಹೊರತುಪಡಿಸಿ ಇತರ ನೇಕಾರರುಗಳನ್ನು ಬಿಪಿಎಲ್ ವರ್ಗದ ನೇಕಾರರನ್ನು ಸಾಧ್ಯವಾದಷ್ಟು ಮಟ್ಟಿಗೆ ಗಮನಿಸಿಕೊಂಡ ನಂತರ ಮಾತ್ರವೇ ಪರಿಗಣಿಸಲಾಗುವುದು.

ಬಿಪಿಎಲ್ ವರ್ಗದ ನೇಕಾರರಿಗೆ ರೂ. 25,000/-ಗಳ ಪೂರ್ತಿ ನೆರವನ್ನು ಕೇಂದ್ರ ಸರ್ಕಾರವೇ ಭರಿಸುವುದು ಹಾಗೂ ಅನ್ಯ ನೇಕಾರರಿಗೆ ಕೇಂದ್ರ ಸರ್ಕಾರದಿಂದ 75%, ಅಂದರೆ ರೂ. 18,750/- ಗಳನ್ನು ನೀಡಲಾಗುವುದು. ಉಳಿದ ಮೊತ್ತವನ್ನು ರಾಜ್ಯ ಸರ್ಕಾರ/ಫಲಾನುಭವಿಗಳು ಭರಿಸುವರು.

4. ನೂಲು, ಬಣ್ಣ ಮತ್ತು ರಾಸಾಯನಿಕಗಳ ಪೂರೈಕೆಗಾಗಿ ಆಯ್ದ ಗುಂಪುಗಳಿಗೆ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಒದಗಿಸಲ್ಪಡುವ ಹಿಮ್ಮುಖ ಸಂಪರ್ಕ.

5. ಕೈಮಗ್ಗದ ಗುಂಪುಗಳಿಂದ ಉತ್ಪನ್ನಗಳ ಮಾರ್ಕೆಟಿಂಗ್ ಮಾಡುವ ಸಲುವಾಗಿ ಜಿಲ್ಲಾಮಟ್ಟದ ಈವೆಂಟ್‌ಗಳು, ರಾಷ್ಟ್ರೀಯ ಎಕ್ಸ್‌ಪೋ, ವಿಶೇಷ ಎಕ್ಸ್‌ಪೋಗಳು, ಕರಕುಶಲ ಮೇಳಗಳು ಮುಂತಾದವುಗಳನ್ನು ರಫ್ತು ಉತ್ತೇಜನೆಯಡಿಯಲ್ಲಿ ಏರ್ಪಡಿಸಿ ಮುಮ್ಮುಖ ಸಂಪರ್ಕ ಒದಗಿಸುತ್ತದೆ.

6. ವಿನ್ಯಾಸಹೂಡುವಳಿಗಳು ನೇಕಾರರ ಸೇವಾ ಕೇಂದ್ರಗಳಿಂದ ಒದಗಿಸಲ್ಪಡುತ್ತವೆ.

**(ಬಿ.1) ವಿವಿಧ ಉಪಾಂಗಗಳ ಹಂಚಿಕೆಯ ಪರಿಮಾಣವು ಕೆಳಕಂಡಂತೆ ಇರುವುದು.**

| ಕ್ರ. ಸಂ. | ಉಪಾಂಗಗಳು | ಪ್ರತಿ ನೇಕಾರರಿಗೆ ಹಣಕಾಸಿನ ನೆರವು | ಹಂಚಿಕೆ ಕೇಂದ್ರ ಸರ್ಕಾರ : ರಾಜ್ಯ: ಅನುಷ್ಠಾನ ಏಜೆನ್ಸಿ/ಫಲಾನುಭವಿ |
|---|---|---|---|
| ಎ) | ಪ್ರಾಥಮಿಕ ಹೂಡುವಳಿಗಳು | ಮೂಲಧನವಾಗಿ ರೂ. 6,000/- ಒಂದು ಬಾರಿಗೆ | 70:20:10 |
| | | ಹೊಸ ಮಗ್ಗಕ್ಕಾಗಿ ರೂ. 8,000/- ಒಂದು ಬಾರಿಗೆ | 70:20:10 |
| | | ಡಾಬಿಗಾಗಿ ರೂ. 4,000/- ಒಂದು ಬಾರಿಗೆ | 70:20:10 |
| | | ಚಾಕಾರ್ಡ್‌ಗಾಗಿ ರೂ. 6,000/- ಒಂದು ಬಾರಿಗೆ | 70:20:10 |
| | | ಸಲಕರಣೆಗಳಿಗಾಗಿ ರೂ. 2,000/- ಒಂದು ಬಾರಿಗೆ | 70:20:10 |
| ಬಿ) | ಕೌಶಲ್ಯ ಉನ್ನತೀಕರಣ | 20 ಪ್ರಶಿಕ್ಷಣಾರ್ಥಿಗಳ ತಂಡಕ್ಕೆ ನೇಯ್ಗೆಗೆ ರೂ. 3.00 ಲಕ್ಷ, ಬಣ್ಣ ಹಾಕುವಿಕೆಗೆ ರೂ. 1.00ಲಕ್ಷ, ವಿನ್ಯಾಸಕ್ಕೆ ರೂ. 0.50 ಲಕ್ಷ, 50 ಪ್ರಶಿಕ್ಷಣಾರ್ಥಿಗಳ ತಂಡಕ್ಕಾಗಿ ನಿರ್ವಹಣಾ ತರಬೇತಿಗಾಗಿ ರೂ. 0.25 ಲಕ್ಷ - ಒಂದು ಬಾರಿಗೆ | 100% ಕೇಂದ್ರ ಸರ್ಕಾರ |
| ಸಿ) | ಕಾರ್ಯಾಗಾರ ನಿರ್ಮಾಣ | 20 ಚ.ಮೀ. ವಿಸ್ತೀರ್ಣದ ಕಾರ್ಯಾಗಾರ ನಿರ್ಮಿಸಲು ರೂ. 25,000/-ದ ವರೆಗಿನ ನೆರವನ್ನು ಕೇಂದ್ರ ಸರ್ಕಾರದಿಂದ ಬಡತನದ ರೇಖೆಯ ಕೆಳಗಿನ ನೇಕಾರರಿಗೆ ನೀಡಲಾಗುವುದು. ಇತರ ನೇಕಾರರಿಗೆ ಕೇಂದ್ರ ಸರ್ಕಾರವು ರೂ. 25,000/-ದ 75% ಅಂದರೆ ರೂ. 18750/-ವರೆಗೆ ಮಾತ್ರ ನೆರವು ನೀಡುವುದು | ಉಳಿದಿದ್ದನ್ನು ರಾಜ್ಯ ಸರ್ಕಾರ/ ಫಲಾನುಭವಿಗಳು ಭರಿಸಬೇಕು |

+ ಭೂಮಿಯ ಹಕ್ಕು ನೇಕಾರರ ಹೆಸರಿನಲ್ಲಿದೆ ಎಂಬುದರ ಪುರಾವೆಯ ಪ್ರಮಾಣ ಪತ್ರ ಸಲ್ಲಿಸಬೇಕು.

ಟಿಪ್ಪಣಿ :

(i) ನೆರವಿನ ಅಗತ್ಯವಿರುವ ಪ್ರತಿಯೊಬ್ಬ ನೇಕಾರರಿಗೂ ಯಾವುದಾದರೂ ಬಗೆಯ ನೆರವು ದೊರೆಯುವಂತೆ ಪ್ರಯತ್ನಿಸಲಾಗುವುದು.

(ii) ಮೇಲ್ಕಂಡ ಕ್ರಮಸಂಖ್ಯೆ 1 ಮತ್ತು 3ರಲ್ಲಿ ನೀಡಲಾಗುವ ನೆರವನ್ನು ರಾಜ್ಯ ಸರ್ಕಾರದ ಮೂಲಕ ಅನುಷ್ಠಾನ ಏಜೆನ್ಸಿಗೆ ಬಿಡುಗಡೆ ಮಾಡಲಾಗುವುದು. ಕ್ರ.ಸಂ. 2ರಲ್ಲಿನ ಉಪಾಂಗಗಳಿಗಾಗಿ ನೆರವನ್ನು ನೇರವಾಗಿ ನೇಕಾರರ ಸೇವಾ ಕೇಂದ್ರಗಳಿಗೆ ಬಿಡುಗಡೆ ಮಾಡಲಾಗುವುದು.

(iii) ಈಶಾನ್ಯ ರಾಜ್ಯಗಳು, ಸಿಕ್ಕಿಂ, ಜಮ್ಮು-ಕಾಶ್ಮೀರ, ಹಿಮಾಚಲಪ್ರದೇಶ, ಉತ್ತರಾಂಚಲ, ಚತ್ತೀಸ್‌ಘಡ ಮತ್ತು ಜಾರ್ಖಂಡ್ ರಾಜ್ಯಗಳ ಪ್ರದೇಶಗಳಿಗೆ ಪ್ರಾಥಮಿಕ ಹೂಡುವಳಿ ಉಪಾಂಗಗಳ ಹಂಚಿಕೆಯ ವಿನ್ಯಾಸವು ಕೇಂದ್ರದಿಂದ 90%, ರಾಜ್ಯ ಸರ್ಕಾರದಿಂದ 5% ಹಾಗೂ ಫಲಾನುಭವಿ ಸಂಘಟನೆಯಿಂದ 5% ಆಗಿರುವುದು.

(ಬಿ.2) ಗುಂಪು ದೃಷ್ಟಿಕೋನಕ್ಕಾಗಿ ಅನುಷ್ಠಾನ ಏಜೆನ್ಸಿ

ಆಯಾರಾಜ್ಯದ ಕೈಮಗ್ಗ ಸಹಾಯಕ ನಿರ್ದೇಶಕರು ಅನುಬಂಧ-ಬಿ-1ರ ಪ್ರಕಾರ ಗುಂಪಿನ ಬೇಸ್‌ಲೈನ್ ಸರ್ವೆ ಕೈಗೊಳ್ಳುವರು. ಈ ಸರ್ವೇಕ್ಷಣೆಯನ್ನಾಧರಿಸಿ, ಈ ಗುಂಪುಗಳ ನೇಕಾರರಿಗೆ ಅವಶ್ಯಕವಿರುವ ಹಣಕಾಸು ನೆರವಿನ ರೂಪುರೇಖೆಗಳನ್ನು ಹೊಂದಿದ ಸಂಕ್ಷಿಪ್ತ ಯೋಜನಾ ವರದಿಯನ್ನು ಬಿ.1 ಮತ್ತು ಬಿ.2 ನಮೂನೆಯಲ್ಲಿ, ಬಿ.2(1), ಬಿ.2(2) ಮತ್ತು ಬಿ.2(3)ಗಳ ಅನುಬಂಧಗಳೊಂದಿಗೆ ಸಿದ್ಧಪಡಿಸಲಾಗುವುದು. ಇದನ್ನು ಪರಿಶೀಲಿಸಿ ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಗೆ ಶಿಫಾರಸು ಮಾಡುವ ಸಲುವಾಗಿ ಇವುಗಳನ್ನು ಎಸ್‌ಎಲ್‌ಪಿಸಿಯ ಮುಂದೆ ಮಂಡಿಸಲಾಗುವುದು.

(ಬಿ.3) ಗುಂಪು ಯೋಜನಾ ಪ್ರಸ್ತಾವನೆಗಳ ಅನುಮೋದನೆ ಮತ್ತು ಹಣ ಬಿಡುಗಡೆ

ಕೇಂದ್ರ ಸರ್ಕಾರದ ಪಾಲಿನ 75%ರಷ್ಟನ್ನು ರಾಜ್ಯ ಸರ್ಕಾರದ ಮೂಲಕ ಅನುಷ್ಠಾನ ಏಜೆನ್ಸಿಗೆ ಮುಂಚಿತವಾಗಿಯೇ ಬಿಡುಗಡೆ ಮಾಡಲಾಗುವುದು. ರಾಜ್ಯಸರ್ಕಾರ ಅನುಷ್ಠಾನ ಏಜೆನ್ಸಿ/ಫಲಾನುಭವಿಗಳ ಪಾಲಿನೊಂದಿಗೆ ಬಿಡುಗಡೆ ಮಾಡಲ್ಪಟ್ಟ ಕೇಂದ್ರದ ಪಾಲನ್ನು ಪೂರ್ತಿಯಾಗಿ ಬಳಕೆ ಮಾಡಿ. ಆ ಬಗ್ಗೆ ಬಳಕೆ ಪ್ರಮಾಣಪತ್ರ, ಪರಿಶೋಧಿತ ಲೆಕ್ಕಪತ್ರಗಳು ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿ ಮುಂತಾದವನ್ನು ಸಲ್ಲಿಸಿದ ನಂತರ, ಉಳಿದ 25% ಅನ್ನು ಬಿಡುಗಡೆ ಮಾಡಲಾಗುವುದು. ಯೋಜನೆಯು ಪೂರ್ಣಗೊಂಡ ನಂತರ, ಸಂಬಂಧಿತ ಕೈಮಗ್ಗ ಸಹಾಯಕ  ನಿರ್ದೇಶಕರು ರಾಜ್ಯ ಸರ್ಕಾರದ ಮೂಲಕ ನವದೆಹಲಿಯ ಕೈಮಗ್ಗದ ಅಭಿವೃದ್ಧಿ ಆಯುಕ್ತರಿಗೆ ಪ್ರಗತಿ ಮತ್ತು ಮೌಲ್ಯಮಾಪನ ವರದಿಗಳನ್ನು ಸಲ್ಲಿಸುವರು. ಆದಾಗ್ಯೂ ಕೌಶಲ್ಯ ಉನ್ನತೀಕರಣ ಕುರಿತಂತೆ ಸ್ಟೈಪೆಂಡ್ ನೀಡಿಕೆ, ಗೌರವ ಸಂಭಾವನೆ, ಆಡಳಿತಾತ್ಮಕ ಮತ್ತು ಸಾದಿಲ್ವಾರು ವೆಚ್ಚಗಳು ನಿರ್ವಹಣಾ ತರಬೇತಿಗಳ ವೆಚ್ಚಗಳಿಗಗಿ ನೆರವನ್ನು ಪೂರ್ತಿಯಾಗಿ ಮೊದಲೇ ಬಿಡುಗಡೆ ಮಡಲಾಗುವುದು. ಆದರೆ ನೂಲು, ಮಗ್ಗಗಳ ಖರೀದಿ, ಸ್ಥಾಪನಾ ವೆಚ್ಚಗಳು, ವಾರ್ಪಿಂಗ್‌ಡ್ರಮ್, ಸಲಕರಣೆಗಳು, ಮಾದರಿಗಳ/ವಿನ್ಯಾಸಗಳ ದಾಖಲೀಕರಣ, ಶೆಡ್‌ಗಳನ್ನು ಬಾಡಿಗೆ ಪಡೆಯುವಿಕೆ, ವಿದ್ಯುತ್‌ಶಕ್ತಿ ಮತ್ತು ನೀರಿನ ವೆಚ್ಚಗಳು, ಟೂಲ್‌ಕಿಟ್‌ಗಳು ಮುಂತಾದವುಗಳಿಗಾಗಿ ಮುಂಗಡವಾಗಿ 75% ಬಿಡುಗಡೆಮಾಡಿ, ಉಳಿದ 25% ಅನ್ನು ಬಳಕೆಮಾಡಿದ ಪ್ರಮಾಣಪತ್ರ, ಪರಿಣಾಮದ ವರದಿಗಳನ್ನು ಸಲ್ಲಿಸಿದ ನಂತರ ನೀಡಲಾಗುವುದು.

ಟಿಪ್ಪಣಿ : ಗುಂಪಿನ ದೃಷ್ಟಿಕೋನದ, ಅಂದರೆ ಸಮೂಹದಾಚೆಗಿನ ಪ್ರಸ್ತಾವನೆಗಳನ್ನು ರಾಜ್ಯ ಸರ್ಕಾರವು ಅನುಬಂಧ–ಬಿ.1 ಮತ್ತು ಬಿ.2ರ ಪ್ರಕಾರ ಬಿ.2(1), ಬಿ.2(2) ಮತ್ತು ಬಿ.2(3)ಗಳೊಂದಿಗೆ, ಪ್ರಸ್ತಾವನೆಗೆ ಅನುಮೋದನೆ ನೀಡಿದ ಎಸ್‌ಎಲ್‌ಪಿಸಿ ಸಭೆಯ ಕಲಾಪಗಳೊಂದಿಗೆ ಸಲ್ಲಿಸಬೇಕು.

ಭಾಗ – ಸಿ

**(ಸಿ) ಕೈಮಗ್ಗದ ಸಂಘಟನೆಗಳಿಗೆ ಹಣಕಾಸಿನ ನೆರವು**

**(ಸಿ.1) ಮಾರ್ಕೆಟಿಂಗ್ ಪ್ರೋತ್ಸಾಹಧನ (ಎಂ.ಐ)**

ಕೈಮಗ್ಗದ ಉತ್ಪನ್ನಗಳ ಮಾರಾಟಕ್ಕೆ ಅನುಕೂಲಕರವಾದ ಸ್ಥಿತಿಗತಿಗಳನ್ನು ರೂಪಿಸುವ ಸಲುವಾಗಿ ಕೈಮಗ್ಗದ ಏಜೆನ್ಸಿಗಳಿಗೆ ಮಾರ್ಕೆಟಿಂಗ್ ಪ್ರೋತ್ಸಾಹಕ ನೀಡಲಾಗುತ್ತದೆ. ಇದು ಸಾಮಾನ್ಯವಾಗಿ ಕೈಮಗ್ಗದ ವಲಯದ ಬೆಲೆಗಳ ಸ್ಪರ್ಧಾತ್ಮಕತೆಗಾಗಿ, ಬೆಲೆಗಳ ಮೇಲೆ ನೀಡುವ ಪ್ರೋತ್ಸಾಹಧನವಾಗಿದ್ದು, ಇದರಿಂದ, ಒಂದೆಡೆ ಅವು ಬೆಲೆಗಳನ್ನು ಅಲ್ಪ ಪ್ರಮಾಣದಲ್ಲಿ ಇಳಿಸಲು ನೆರವಾದರೆ, ಮತ್ತೊಂದೆಡೆ ಅವರುಗಳು ಉತ್ಪಾದನೆ ಮತ್ತು ಉತ್ಪಾದಕತೆಗಳ ಸುಧಾರಣೆಗಾಗಿ, ಮೂಲಭೂತ ಸೌಕರ್ಯಗಳಿಗಾಗಿ ಹೂಡಿಕೆ ಮಾಡಬಹುದು. ಕೈಮಗ್ಗದ ಉತ್ಪನ್ನಗಳ ಒಟ್ಟಾರೆ ಮಾರಾಟವನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಗ್ರಾಹಕರನ್ನು ಆಕರ್ಷಿಸುವ ಚಟುವಟಿಕೆಗಳಿಗಾಗಿ ಏಜೆನ್ಸಿಯು ಈ ಹಣವನ್ನು ಹೂಡಿಕೆ ಮಾಡಬೇಕು. ಮಾರುಕಟ್ಟೆಯ ಪ್ರೋತ್ಸಾಹಕಗಳ ನೆರವು ರಾಜ್ಯ ಕೈಮಗ್ಗ ನಿಗಮಗಳು, ಅಪೆಕ್ಸ್ ಸಹಕಾರ ಸಂಘಗಳು, ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ರಾಷ್ಟ್ರೀಯ ಕೈಮಗ್ಗ ಸಂಘಟನೆಗಳಿಗೆ ಲಭ್ಯವಿರುತ್ತದೆ. ನೀಡಲಾಗುವ ನೆರವಿನ ಪ್ರಮಾಣವು ಕೆಳಕಂಡಂತಿರುವುದು.

| ಉಪಾಂಗ | ಪ್ರತಿ ನೇಕಾರರಿಗೆ ಹಣಕಾಸು ನೆರವು (ಲಕ್ಷ ರೂ.ಗಳು) | ಕೇಂದ್ರ ಸರ್ಕಾರ:ರಾಜ್ಯ ಸರ್ಕಾರಗಳ ನಡುವೆ ಹಂಚಿಕೆ |
|---|---|---|
| ಮಾರುಕಟ್ಟೆ ಪ್ರೋತ್ಸಾಹಧನ–ಕೈಮಗ್ಗ ನಿಗಮ, ಆಪೆಕ್ಸ್ ಸಹಕಾರ ಸಂಘಗಳು, ಪ್ರಾಥಮಿಕ ನೇಕಾರರ ಸಹಕಾರ ಸಂಘಗಳು, ರಾಷ್ಟ್ರೀಯ ಕೈಮಗ್ಗದ ಸಂಘಟನೆಗಳು | ಕಳೆದ ಮೂರು ವರ್ಷಗಳಲ್ಲಿನ ಸರಾಸರಿ ಮಾರಾಟ ವಹಿವಾಟಿನ 10%ರಷ್ಟು | 50:50, ಕೇಂದ್ರ ಸರ್ಕಾರದಿಂದ ಪೂರ್ಣ ನೆರವು ಭರಿಸಲ್ಪಡುವ, ರಾಷ್ಟ್ರಮಟ್ಟದ ಕೈಮಗ್ಗದ ಸಂಘಟನೆ/ಸಂಘಗಳನ್ನು ಹೊರತುಪಡಿಸಿ. |

ಅರ್ಹ ಕೈಮಗ್ಗ ಸಂಘಟನೆಗಳು ಮಾರುಕಟ್ಟೆಯ ಪ್ರೋತ್ಸಾಹಕ್ಕಾಗಿ ತಮ್ಮ ಬೇಡಿಕೆಗಳನ್ನು ರಾಜ್ಯ ಸರ್ಕಾರದ ಮೂಲಕ ಅನುಬಂಧ 'ಸಿ.1'ನಲ್ಲಿರುವ ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕು. ರಾಜ್ಯ ಸರ್ಕಾರವು ಪ್ರತ್ಯೇಕ ಕ್ರೋಢಿಕೃತ ಕ್ಲೇಮುಗಳನ್ನು ಅನುಬಂಧ–ಸಿ ಯಲ್ಲಿನ ಪ್ರಮಾಣಪತ್ರದೊಂದಿಗೆ ಕ್ರೋಢಿಕೃತ ವಿವರಣಾ ಪಟ್ಟಿಯ ಸಮೇತ ಈ ಕಚೇರಿಗೆ ರವಾನೆ ಮಾಡುವುದು. ಮಾರುಕಟ್ಟೆಯ ಪ್ರೋತ್ಸಾಹಧನಕ್ಕಾಗಿ ರಾಜ್ಯ ಕೈಮಗ್ಗ ಸಂಘಟನೆಗಳನ್ನು ಕುರಿತ ನೆರವನ್ನು ಸಂಬಂಧಿತ ರಾಜ್ಯ ಸರ್ಕಾರದ ಮೂಲಕ ಅನುಷ್ಠಾನ ಏಜೆನ್ಸಿಗೆ ಬಿಡುಗಡೆ ಮಾಡಲಾಗುವುದು. ಆದರೆ ರಾಷ್ಟ್ರಮಟ್ಟದ ಕೈಮಗ್ಗ ಸಂಘಟನೆಗಳಿಗೆ ನೇರವಾಗಿ ಬಿಡುಗಡೆ ಮಾಡಲಾಗುವುದು.

ಟಿಪ್ಪಣಿ :

(i) ಪ್ರಾಥಮಿಕ ಸಂಘಗಳ ಮಾರಾಟ ವಹಿವಾಟು ಲೆಕ್ಕಾಚಾರ ಮಾಡುವಾಗ ಪ್ರಾಥಮಿಕ ನೇಕಾರರ ಸಹಕಾರ ಸಂಘಗಳು/ಸ್ವಸಹಾಯ ನೆರವು ಗುಂಪುಗಳಿಂದ ಅಪೆಕ್ಸ್ ಸಹಕಾರ ಸಂಘಗಳು/ಒಕ್ಕೂಟಗಳು/ನಿಗಮಗಳಿಗೆ ಮಾಡಲ್ಪಟ್ಟ ಮಾರಾಟಗಳನ್ನು ಪರಿಗಣನೆ ಮಾಡದೇ ಮಾರುಕಟ್ಟೆ ಪ್ರೋತ್ಸಾಹಕದ ಅರ್ಹ ನೆರವಿನ ಲೆಕ್ಕಾಚಾರ ಮಾಡಲಾಗುತ್ತದೆ.

ಅಂದರೆ, ಪ್ರಾಥಮಿಕ ಸಂಘಗಳು ಅಪೆಕ್ಸ್ ಸಂಘಗಳಿಗೆ/ಒಕ್ಕೂಟಗಳಿಗೆ ಮಾಡುವ ಮಾರಾಟವು ಮಾರುಕಟ್ಟೆ ಪ್ರೋತ್ಸಾಹಧನಕ್ಕೆ ಅರ್ಹವಾಗುವುದಿಲ್ಲ. ಏಕೆಂದರೆ ಅಪೆಕ್ಸ್ ಸಂಘಗಳು/ಒಕ್ಕೂಟಗಳು, ಪ್ರಾಥಮಿಕ ಸಂಘಗಳಿಂದ ಸರಕು ಪಡೆದುಕೊಂಡ ನಂತರ ಮಾಡಿದ ಮಾರಾಟಕ್ಕಾಗಿ ಪ್ರತ್ಯೇಕವಾಗಿ ಮಾರುಕಟ್ಟೆ ಪ್ರೋತ್ಸಾಹಧನಕ್ಕೆ ಬೇಡಿಕೆ ಸಲ್ಲಿಸುತ್ತವೆ.

(ii) ಸರ್ಕಾರದ ಇಲಾಖೆಗಳು/ಏಜೆನ್ಸಿಗಳಿಗೆ ಯಾವುದೇ ಕೈಮಗ್ಗ ಸಂಘಟನೆಗಳು ಮಾಡುವ ಮಾರಾಟವನ್ನು, ಅರ್ಹ ಮಾರುಕಟ್ಟೆ ಪ್ರೋತ್ಸಾಹಕದ ನೆರವು ನಿಗದಿಪಡಿಸಲು, ವಾರ್ಷಿಕ ಮಾರಾಟ ವಹಿವಾಟು ಲೆಕ್ಕಚಾರ ಮಾಡುವಾಗ ಪರಿಗಣಿಸುವುದಿಲ್ಲ.

(iii) ಒಂದು ಕೈಮಗ್ಗದ ಏಜೆನ್ಸಿಯು ಮತ್ತೊಂದು ಕೈಮಗ್ಗದ ಏಜೆನ್ಸಿಗೆ ಮಾಡಿದ ಮಾರಾಟವನ್ನು, ಅರ್ಹ ಮಾರುಕಟ್ಟೆಯ ಪ್ರೋತ್ಸಾಹಧನ ನಿಗದಿ ಪಡಿಸಲು, ವಾರ್ಷಿಕ ಮಾರಾಟದ ವಹಿವಾಟನ್ನು ಲೆಕ್ಕಾಚಾರ ಹಾಕುವಾಗ ಪರಿಗಣಿಸುವುದಿಲ್ಲ.

(iv) ಮಾರುಕಟ್ಟೆಯ ಪ್ರೋತ್ಸಾಹಧನ ಲೆಕ್ಕಾಚಾರ ಮಾಡುವಾಗ ಕೈಮಗ್ಗದ ಏಜೆನ್ಸಿಗಳು ವಸ್ತುವಿನಿಮಯ ವ್ಯವಸ್ಥೆಯಲ್ಲಿ ಮಾಡಿದ ಮಾರಾಟಗಳನ್ನು ಪರಿಗಣಿಸುವುದಿಲ್ಲ.

(v) ಮಾರಾಟದ ಪ್ರೋತ್ಸಾಹಧನದ ಅರ್ಹತೆ ನಿಗದಿಪಡಿಸುವಾಗ ಮೇಲ್ಕಂಡ ಕ್ರ.ಸಂಖ್ಯೆ (i)ರಿಂದ (iii)ರಲ್ಲಿನ ಅಂಶಗಳನ್ನು ಪರಿಗಣಿಸಲಾಗಿದೆ ಎಂದೂ, ಹಾಗೂ ಮಾರುಕಟ್ಟೆಯ ಪ್ರೋತ್ಸಾಹಧನ ಪಡೆಯುವ ಸಲುವಾಗಿ ಲೆಕ್ಕ ಹಾಕಿರುವ ಮಾರಾಟವನ್ನು ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ನೀಡಲಾಗುವ ಬೇರಾವುದೇ ಯೋಜನೆಯ ಅಡಿಯಲ್ಲಿ ನೆರವು ಪಡೆಯುವ ಸಲುವಾಗಿ ಲೆಕ್ಕಾಚಾರ ಮಾಡಿರುವುದಿಲ್ಲವೆಂದು ಪ್ರಮಾಣಪತ್ರವನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು.

(vi) ಮಂಡಿಸಲಾಗಿರುವ ಆ ವರ್ಷದ ಬೇಡಿಕೆಯು, ಪರಿಗಣನೆಯಲ್ಲಿರುವ ಅನುದಾನವು ಸಂಪೂರ್ಣವೂ, ಅಂತಿಮವೂ ಆಗಿದ್ದು, ಅದೇ ವರ್ಷಕ್ಕೆ ರಾಜ್ಯದ ಬೇರಾವುದೇ ಸಂಸ್ಥೆಯ ಬೇಡಿಕೆಗಳನ್ನು ಮಂಡಿಸಲಾಗುವುದಿಲ್ಲವೆಂದು ರಾಜ್ಯ ಸರ್ಕಾರವೂ ಸಹ ಪ್ರಮಾಣೀಕರಿಸಬೇಕು.

**(ಡಿ) ಕೈಮಗ್ಗದ ಸಂಘಟನೆಗಳ ಬಲಸಂವರ್ಧನೆ**

ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕೈಮಗ್ಗದ ಸಂಘಟನೆಗಳು ಕಾರ್ಯಸಾಧುವಾಗುವಂತೆ ಅವುಗಳ ಸಾಲಮಿತಿ/ಕಾರ್ಯಾತ್ಮಕ ಬಂಡವಾಳವನ್ನು ಹೆಚ್ಚಿಸುವ ಆರ್ಥಿಕ ಪುನರ್‌ವಿನ್ಯಾಸಕ್ಕೆ ಒಳಪಡಿಸುವ ನೆರವುಗಳನ್ನು ಇದು ಒಳಗೊಂಡಿದೆ.

| ಉಪಾಂಗಗಳು | ಪ್ರತಿ ನೇಕಾರರಿಗೆ ಹಣಕಾಸು ನೆರವು (ಲಕ್ಷ ರೂ.ಗಳು) | ಕೇಂದ್ರ ಸರ್ಕಾರ:ರಾಜ್ಯ ಸರ್ಕಾರಗಳ ನಡುವೆ ಹಂಚಿಕೆ |
|---|---|---|
| ಕೈಮಗ್ಗ ಸಂಘಟನೆಗಳ ಬಲಸಂವರ್ಧನೆ – ಕೈಮಗ್ಗ ನಿಗಮಗಳು, ಅಪೆಕ್ಸ್ ಸಹಕಾರ ಸಂಘಗಳು, ರಾಷ್ಟ್ರೀಯ ಕೈಮಗ್ಗ ಸಂಘಟನೆಗಳು | ಪ್ರಸ್ತಾವನೆಯ ಪ್ರಕಾರ | 50:50 |

**ಟಿಪ್ಪಣಿ** : ಈ ಉಪಾಂಗದ ನೆರವು ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕೈಮಗ್ಗದ ಸಂಘಟನೆಗಳಿಗೆ ಮಾತ್ರ ಅನ್ವಯಿಸುವುದೇ ವಿನಃ ಸಮೂಹಗಳಿಗೆ ಅನ್ವಯಿಸುವುದಿಲ್ಲ. ಕೈಮಗ್ಗ ಸಂಘಟನೆಗಳನ್ನು ಬಲಪಡಿಸುವ ಸಲುವಾಗಿ ರಾಜ್ಯ ಕೈಮಗ್ಗ ಸಂಘಟನೆಗಳಿಗೆ ನೀಡಲಾಗುವ ನೆರವನ್ನು ಅನುಷ್ಠಾನ ಏಜೆನ್ಸಿಗಳಿಗೆ ಆಯಾ ರಾಜ್ಯ ಸರ್ಕಾರಗಳ ಮೂಲಕ ಬಿಡುಗಡೆ ಮಾಡಲಾಗುವುದು.

ಈ ಉಪಾಂಗಕ್ಕಾಗಿ ನೆರವು ಪಡೆದುಕೊಳ್ಳಲು ಸಂಘಟನೆಗಳು ತಮ್ಮ ವ್ಯಾವಹಾರಿಕ ನೀತಿಗಳನ್ನು ಸರಳೀಕರಿಸಿ ಮಾನವಶಕ್ತಿಯನ್ನು ಸಜ್ಜುಗೊಳಿಸುವುದರ ಮೂಲಕ ತಮ್ಮ ಕಾರ್ಯಸಾಧುತ್ವವನ್ನು ಮೊದಲಿಗೆ ಸುಧಾರಣೆ ಮಾಡಿಕೊಳ್ಳಬೇಕು. ವಿಶ್ವಾಸಾರ್ಹ ಯೋಜನೆಯೊಂದರ ರೂಪದಲ್ಲಿನ ಪರಿವರ್ತನಾ ಕಾರ್ಯವಿಧಾನಕ್ಕೆ ಬ್ಯಾಂಕು/ಹಣಕಾಸು ಸಂಸ್ಥೆಗಳಿಂದ ಮತ್ತು ರಾಜ್ಯಮಟ್ಟದ ಯೋಜನಾ ಸಮಿತಿಯಿಂದ ಅನುಮೋದಿಸಲ್ಪಡಬೇಕು. ಯೋಜನೆಯನ್ನು ಅಭಿವೃದ್ದಿ ಆಯುಕ್ತ (ಕೈಮಗ್ಗ)ರ ಕಚೇರಿಯಿಂದ ಅನುಮೋದಿಸಲ್ಪಟ್ಟು, ಸ್ವತಂತ್ರ ಆಡಳಿತ ಸಲಹಾ ಸಂಸ್ಥೆಯಿಂದ ತಯಾರಿಸಲ್ಪಡಬೇಕು. ಸಂಬಂಧಿತ ಬ್ಯಾಂಕು/ಹಣಕಾಸು ಸಂಸ್ಥೆಯು, ಸಂಘಟನೆಯ ಪರಿವರ್ತನಶೀಲ ತಿರುವುಸಾಧಿಸಲು ಅಗತ್ಯವಾದ ಹಣದ ವ್ಯಯವನ್ನು ನಿಗದಿಪಡಿಸಿ ಯೋಜನೆಗೆ ತಾತ್ವಿಕವಾಗಿ ಅನುಮೋದಿಸುವುದು. ಇದರಿಂದಾಗಿ, ಪ್ರಾಥಮಿಕ ಸಂಘಗಳು ಹಾಗೂ ಸಹಕಾರಿ ಮಗ್ಗುಲಿನ ಹೊರಗಿರುವ ನೇಕಾರರುಗಳ ಮಾರುಕಟ್ಟೆಯ ಚಟುವಟಿಕೆಗಳಿಗೆ ನೆರವಾಗಲು ಸಂಘಟನೆಗೆ ಸಹಾಯಕವಾಗುವುದು.

ಈ ಯೋಜನೆಗಳು ಸಂಘಟನೆಯ ಅವಶ್ಯಕತೆಗಳಿಗೆ ಅನುಗುಣವಾಗಿ ಅಗತ್ಯಾಧಾರಿತವಾಗಿರುತ್ತವೆ. ಯೋಜನೆಯು ಸಿಬ್ಬಂದಿಗಳ ಅವಶ್ಯಕತೆ ಹಾಗೂ ಆಡಳಿತಾತ್ಮಕ ವಿನ್ಯಾಸದ ಮಿತಿಗೊಳಿಸುವಿಕೆಯತ್ತ ಖಂಡಿತ ಗಮನಹರಿಸುತ್ತದೆ. ಸಂಘಟನೆಯ ನಿರ್ವಹಣ ವೆಚ್ಚ, ವಾಹನ ಖರೀದಿ, ಕಟ್ಟಡ ಮುಂತಾದವುಗಳಿಗಾಗಿ ಯಾವುದೇ ನೆರವು ನೀಡಲಾಗುವುದಿಲ್ಲ. ರಾಜ್ಯ ಸರ್ಕಾರವು ತೀರುವಳಿ ನೀಡಿದ ಪುನರ್ವಸತಿ ಪ್ರಸ್ತಾವನೆಗಳನ್ನು ಭಾರತ ಸರ್ಕಾರದ ಜವಳಿ ಕಾರ್ಯದರ್ಶಿಗಳ ನೇತೃತ್ವದ ಸಮಿತಿಯ ಮುಂದೆ ಮಂಡಿಸಲಾಗುವುದು. ಈ ಸಮಿತಿಯಲ್ಲಿ ಕೈಮಗ್ಗ ಅಭಿವೃದ್ಧಿ ಆಯುಕ್ತರು, ಆರ್ಥಿಕ ಸಚಿವಾಲಯದ ಸಂಬಂಧಿತ ರಾಜ್ಯಸರ್ಕಾರ ಮತ್ತು ಏಜೆನ್ಸಿಯ ಪ್ರತಿನಿಧಿಗಳು ಇರುವರು. ಇಂತಹ ಯೋಜನೆಗಳಿಗಾಗಿ ಅಂತಹ ಪುನರ್ ರಚನೆಗಾಗಿ ಅಗತ್ಯವಿರುವ ಮೂಲಧನದ ನೆರವನ್ನು ಕೇಂದ್ರ ಮತ್ತು ರಾಜ್ಯಗಳಿಂದ 50:50 ಅನುಪಾತದಲ್ಲಿ ಒದಗಿಸಲಾಗುತ್ತದೆ.

**ಭಾಗ–ಡಿ**

**(ಡಿ) ನೂತನ ಆವಿಷ್ಕಾರಗಳು ಮತ್ತು ಪ್ರಚಾರ, ಉಸ್ತುವಾರಿ, ಮೇಲ್ವಿಚಾರಣೆ, ತರಬೇತಿ ಮತ್ತು ಯೋಜನೆಯ ಮೌಲ್ಯಾಂಕನಕ್ಕಾಗಿ ನೆರವು**

**(ಡಿ.1) ನೂತನ ಆವಿಷ್ಕಾರಗಳು**

ಯಾವುದೇ ಯೋಜನೆಗಾಗಿ ನಿಯೋಜಿಸಲ್ಪಟ್ಟ 100%ವರೆಗಿನ ಹಣವನ್ನು, ಕಾರ್ಯಕ್ರಮ ಜಾರಿಗೊಳಿಸುವ ಸಮಯದಲ್ಲಿ ಆವಿರ್ಭವಿಸಬಹುದಾದ, ಹಾಗೂ ಅನುಮೋದನೆಯ ಸಂದರ್ಭದಲ್ಲಿ ಅಳವಡಿಸಿಕೊಳ್ಳದಿರುವ ನೂತನ ಆವಿಷ್ಕಾರಗಳಿಗಾಗಿ ಬಳಕೆ ಮಾಡಬಹುದಾಗಿದೆ.

(ಡಿ.2) ಪ್ರಚಾರ, ಉಸ್ತುವಾರಿ, ಮೇಲ್ವಿಚಾರಣೆ, ತರಬೇತಿ ಮತ್ತು ಯೋಜನೆಯ ಮೌಲ್ಯಾಂಕನ

(i) ಯೋಜನೆಗಾಗಿ ನಿಯೋಜಿತವಾಗಿರುವ ಆಯವ್ಯಯದ 2%ವರೆಗಿನ ಮೊತ್ತವನ್ನು, ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯ ಅಡಿಯಲ್ಲಿ ಮತ್ತು ಕೈಮಗ್ಗಗಳ ರಾಜ್ಯನಿರ್ದೇಶನಾಲಯದಲ್ಲಿ ಕೆಲಸಮಾಡುತ್ತಿರುವ ಸಿಬ್ಬಂದಿಗಳ ತರಬೇತಿಗಾಗಿ ಹಾಗೂ ಪ್ರಚಾರ, ಉಸ್ತುವಾರಿ, ಮೇಲ್ವಿಚಾರಣೆ ಮತ್ತು ಯೋಜನೆಯ ಮೌಲ್ಯಾಂಕನಗಳಿಗಾಗಿ ಬಳಕೆ ಮಾಡಬಹುದಾಗಿದೆ.

(ii) ಅಗತ್ಯವೆನಿಸಿದಲ್ಲಿ ಸ್ವತಂತ್ರ ಮೌಲ್ಯಮಾಪನ ಏಜೆನ್ಸಿಗಳ ನೆರವಿನಿಂದ, ಕೈಮಗ್ಗದ ಅಭಿವೃದ್ಧಿ ಆಯುಕ್ತರು ಯೋಜನೆಗಳ ಅನುಷ್ಠಾನದ ಉಸ್ತುವಾರಿ ಕೈಗೊಳ್ಳಬಹುದಾಗಿದೆ. ನಿಯತಕಾಲಿಕ ವರದಿಗಾರಿಕೆ, ಕ್ಷೇತ್ರ ಸಂದರ್ಶನಗಳು ಹಾಗೂ ಅವಲೋಕನ ಸಭೆಗಳನ್ನು ಈ ಉದ್ದೇಶಕ್ಕಾಗಿ ಬಳಕೆ ಮಾಡಲಾಗುವುದು.

(iii) ರಾಜ್ಯಸರ್ಕಾರದ ಮೂಲಕ, ಅನುಷ್ಠಾನ/ಫಲಾನುಭವಿ ಏಜೆನ್ಸಿಗಳಿಗೆ ಮಂಜೂರು ಮಾಡಲ್ಪಟ್ಟ ಕಾರ್ಯಕ್ರಮಗಳ ಒಟ್ಟಾರೆ ಅನುಷ್ಠಾನ ಮತ್ತು ಉಸ್ತುವಾರಿಯು ಆಯಾ ರಾಜ್ಯ ಸರ್ಕಾರಗಳ ಹೊಣೆಯಾಗಿರುವುದು.

(ಞ) ಐ.ಹೆಚ್.ಡಿ.ಎಸ್. ಯೋಜನೆಯಡಿಯಲ್ಲಿ ಹಾಗೂ ಕಚೇರಿಯ ಇನ್ನಿತರ ಯೋಜನೆಗಳಡಿಯಲ್ಲಿ ಮುಂದಿನ ಹಣ ಬಿಡುಗಡೆಗಳಿಗೆ ಅನುವಾಗುವಂತೆ ಬಳಕೆಮಾಡಿದ ಪ್ರಮಾಣಪತ್ರಗಳ ಮತ್ತು ಪರಿಶೋಧಿತ ಲೆಕ್ಕಪತ್ರಗಳ ಸಲ್ಲಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳಬೇಕು.

(iv) ರಾಜ್ಯಸರ್ಕಾರವೂ ಸಹ ಯೋಜನೆಯು ಪೂರ್ಣಗೊಂಡ ವರದಿ ಮತ್ತು ಮೌಲ್ಯಾಂಕನ ವರದಿಗಳನ್ನು ನೇಕಾರರಿಗೆ ಲಭ್ಯವಾದ ಸೌಲಭ್ಯಗಳು ಮತ್ತು ಸಾಮಾಜಿಕ, ಆರ್ಥಿಕ ಸೌಲಭ್ಯಗಳ ವಿವರಣೆಗಳೊಂದಿಗೆ ಸಲ್ಲಿಸುವುದು.